ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೯ Volume 149	ಬೆಂಗಳೂರು, ಗುರುವಾರ, ಅಕ್ಟೋಬರ್ ೯, ೨೦೧೪ (ಆಶ್ವಯುಜ ೧೭, ಶಕ ವರ್ಷ ೧೯೩೬) Bangalore, Thursday, October 9, 2014 (Aashwayuja 17, Shaka Varsha 1936)	ಸಂಚಿಕೆ ೪೦ Issue 40

ಭಾಗ ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

KARNATAKA PUBLIC SERVICE COMMISSION , 'UDYOGA SOUDHA ' BANGALORE - 1

NOTIFICATION

No. PSC 33 RTB 2011, Bangalore, Dated : 28/08/14

In pursuance of this Office Notification No. R(2)907/2011-12/PSC dated:18/01/12,the Final Select List of candidates for 35 posts of PROBATION OFFICER GRADE-I in the Department of WOMEN & CHILD DEVELOPMENT prepared on the basis of Rule 8(1) of Karnataka Civil Services (Direct Recruitment by Competitive Examinations and Selection) (General) Rules,2006,as amended from time to time was published vide Notification of even number dated 18/06/2014, Now as per the Hon'ble KAT order dated 12-08-2013 in APP. NO'S.6897-6902/2012 which has been upheld by the Hon'ble High Court in W.P. No.56551-56556 The Final select list dated 18-06-2014 is hereby revised. The revised final select list is published for information of the candidate.

Appointing Authority : **GOVERNMENT**

Name of the Department : **WOMEN & CHILD DEVELOPMENT**

SL.NO.	NAME OF THE CANDIDATE	INT.NO.	D_O_B	RESVN.	QUALIFICATION
1	JAYASHREE PATIL A BLOCK, VIDYA NAGAR EAST 2ND MAIN; 2ND CROSS; VIDYA NAGAR; HAVERI HAVERI-581110	25	22/07/77	GM/W	MHSC (F&N)
2	MEENAKSHI. S. KABEDI 337, BEHIND SHRINIVAS TEMPLE 10TH CROSS;MAHALAXMI LAY OUT BENGALURU-560086	37	21/07/73	GM/W	MHSC (F&N)
3	VIJAYALAXMI LOKUR BILDING CDPO OFFICE NEAR HINDIPRACHAR SABA HEADPOST OFFICE DHARWAD-580001	75	22/04/79	GM/W	MHSC (F&N)
4	ANNAPURNA SANGALAD 004; BLOCK A RADHIKA APARTMENT DESHPANDE NAGAR, HUBLI DHARWAD-580029	5	01/06/76	GM/W	MHSC (F&N)

SL.NO.	NAME OF THE CANDIDATE	INT.NO.	D_O_B	RESVN.	QUALIFICATION
5	RAFIKA A HALLUR H.NO.169; CITB LAYOUT; RAJAJI NAGAR, SATTUR DHARWAD-580009	49	11/04/85	GM/W	MHSC (F&N)
6	NIRMALA SURAPUR 283/B, ABHINANDAN NILAY; KHASGAT NAGAR, TALIKOTI MUDDEBIHAL, BIJAPUR-586214	40	19/06/73	GM/K	MHSC (F&N)
7	VEENA M. DOOR NO. 13 SHREE VEERABHADRESHWAR NILAYA OLD DAIRY ROAD; MADIHAL DHARWAD-580006	114	21/04/77	GM/2A/R	M.H.Sc.(HD)
8	SHAILA.KURAHATTI #393, TIRALAPUR NAVALGUND, DHARWAD-582221	74	21/06/86	GM/3A/R	MHSC (F&N)
9	ANNAPURNA KUBAKADDI 437/33 MAHANTANAGAR, HUNGUND BAGALKOT-587118	4	06/03/78	GM/R	MHSC (F&N)
10	GEETHA GUTTARAGIMATH VIVEK NAGAR WEST IBRAHIMPUR ROAD BIJAPUR MANAGULI ROAD BIJAPUR-586101	20	27/10/71	GM	MHSC (F&N)
11	SUMANGALA MALAPUR 151, SRIKANTESHWARA NILAYA; HAMPINAGARA 5TH C MAIN; 7TH CROSS VIJAYANAGAR 2ND STAGE BANGALORE URBAN-560104	71	22/07/76	GM/3B	MHSC (F&N)
12	KAMALAVVA BAILUR FLAT NO. 2, SHRI GANGOTRI NILAY LOTUS LAYOUT; KELAGERI ROAD DHARWAD-580008	110	15/10/81	GM/SC	M.H.Sc (HD)
13	SANTOSH D 24, KENCHIKOPPA POST HARISHI, SORABA SHIVAMOGA-577429	56	24/10/82	GM	MSW
14	SHIVAPRAKASH GOVT PU COLLEGE MORAB MORAB, NAVALGUND DHARWAD-580112	65	18/09/83	GM	MSW
15	PRAMOD KARIVEERAPPA JAKKALI ITAGI, BAZAR ROAD ITAGI, YELABURGA KOPPAL- 583232	46	15/03/83	GM/R	MSW

SL.NO.	NAME OF THE CANDIDATE	INT.NO.	D_O_B	RESVN.	QUALIFICATION
16	DEEPA BASAPPA JAVOOR SHRI HARI KRUPA, BASAVANAGAR-I HALIYAL ROAD, DHARWAD-580001	16	02/04/81	C1	MHSC (F&N)
17	KAVITHA T N JARRY LOBO MAC VILLA 14TH CROSS, NEAR GODOWN R P ROAD, NANJANGUD-571314	92	28/06/77	GM/SC/R	MHSC (F&N)
18	MAHANTASWAMI. PUJAR. NEAR INAMDAR HOSPITAL SORATUR, GANDHI BAYALU GADAG-582120	32	01/11/83	3B/R	MSW
19	ROHINI KOTAGAR KULAGERI CROSS BADAMI, BAGALKOT-587155	98	15/01/84	SC/W	MSW
20	BASAVARAJ JIGALUR HALAPETE JIGALUR BUILDING A/P KERUR, BADAMI BAGALKOT-587206	10	19/07/84	2A	MSW
21	ANIL HALLI ANIL KALLAPPA HALLI C/O. ASHOK PHOTOS; NEAR DILDAR HOTEL; GYANG BOUDI; BIJAPUR TQ – BIJAPUR, DIST – BIJAPUR-586101	82	31/10/72	SC	MSW
22	BHEEMRAYA PLOT NO 21 KSRTC COLONY OLD JEWARGI ROAD NEAR SAI MANDIR, GULBARGA-585103	86	01/08/83	SC	MSW
23	SRIKANT PLOT NO. 9, SSK SAMAJ BHAVANI NAGAR GULBARGA ROAD SEDAM, GULBARGA-585222	68	20/07/84	2A	MSW
24	ANURADHA HADIMANI 167; FARM HOUSE BANDIGANI, YALLATTI JAMKHANDI, BAGALKOT-587311	83	01/06/78	SC/W	MSW
25	GURUPRASAD #10/125, KAVITHAL, UDAYANAGAR MANVI, RAICHUR-584120	21	09/03/77	C1/R	MSW
26	MAHADEVAPPA ISARANAL AT HOSUR, POST HOSUR BADAMI, BAGALKOT-587114	93	02/06/84	ST/R	MSW
27	DEEPAXI JANAKI PLOT NO 27, MANJUNATH NILAYA BASAVA NAGAR GOKAK-591307	17	20/11/82	3A/W	MSW

SL.NO.	NAME OF THE CANDIDATE	INT.NO.	D_O_B	RESVN.	QUALIFICATION
28	SAVITHA Y D 126, 1ST STAGE , TELECOM LAYOUT MYSORE-570009	60	06/03/85	3A/R	MSW
29	SHASHIREKHA 3RD BLOCK, YALAKAPPANA KERI LASHKAR MOHALLA, SHIMOGA-577202	64	24/04/84	2A/W	MSW
30	CHANABASAPPA MANNUR VENKTESHWAR NAGAR AT POST LOKAPUR, KADAR KOPPA ROAD MUDHOL, BAGALKOT-587122	15	07/05/78	2A	MSW
31	SURESHA.C HAMSAGAR, SAGARA SHIVAMOGA-577430	101	04/03/81	SC/R	MSW
32	HULIGEVVA JOGER H NO 24, AT POST SORTUR GADAG-582021	23	01/06/80	2A/W	MSW
33	SUDEEPKUMAR UNKI AT THAMARAHALLI POST THAMARAHALLI HAGARIBOMMANAHALLI BELLARY-583224	69	08/01/84	2A/R	MSW
34	SYED PASHA H NO 11-4-362/41 FARAHA COLONY NEAR OLD MILTON SCHOOL MANVI MANVI, RAICHUR-584123	72	21/06/79	2B/R	MSW

Note :

1. The Revised Final Select list is subject to the decision of Hon'ble KAT in APPNO 2005/12, 6923/12, 4470/14 and 5720/14
2. 1 Post has been kept vacant in compliance with the Honb'le High Court's order Dated :26-07-2013 in W.P.NO. 10875/2012 and is subject to the final decision of the said petition.
3. Sri NAGARAJ selected against serial no. 29 under 3B/RURAL and Sri ANWARHUSENA BAMMANALLI selected against serial no.31 under CAT-1 in the final select list dated : 18-06-2014 have been deleted from the revised list on account of revision.

MANOJ KUMAR MEENA,
Secretary
Karnataka Public Service Commission.

PR 90
SC 50

ನಮೂನೆ-1

(9ನೇ ನಿಯಮ ನೋಡಿ)

ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಮುಂಡರಗಿ, ಜಿ. ಗದಗ

ಅಧಿಸೂಚನೆ ದಿನಾಂಕ: 12-08-2014

Shri SHIVANAGOUDA, NARASANAGOUDA, DONI working as Physical Education Teacher GHPS HESARUR, in the Education Department/Office of the Block Education Office, Mundaragi, is permitted to change his Name to **SHIVANAGOUDA.NARASANAGOUDA.PATIL**

PD C/n 105
SC- 10

BLOCK EDUCATION OFFICER,
PUBLIC EDUCATION DEPARTMENT, MUNDARAGI

FORM-IV

(See Rule 12)

NOTICE

Dated: 04-09-2014

It is hereby notified that the undersigned has changed her/his name from SANGAMMA.H.RUDRASWAMIMATH to REKHA.H.RUDRASWAMIMATH

PD C/n.106

SC - 10 **SANGAMMA.H.RUDRASWAMIMATH**

ಕರ್ನಾಟಕ ಲೋಕ ಸೇವಾ ಆಯೋಗ, " ಉದ್ಯೋಗ ಸೌಧ " ಬೆಂಗಳೂರು-560001

ಅಧಿಸೂಚನೆ

ಸಂಖ್ಯೆ: ಆರ್(1) 284/2014-15/ಪಿಎಸ್‌ಸಿ, ಬೆಂಗಳೂರು, ದಿನಾಂಕ: 07-08-2014

ಆಯೋಗದ ಅಧಿಸೂಚನೆ ಸಂಖ್ಯೆ ಪಿಎಸ್‌ಸಿ 1 ಆರ್‌ಟಿಬಿ-1/2013 ದಿನಾಂಕ 01-06-2013ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರ 32 ಹುದ್ದೆಗಳನ್ನು ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) ನಿಯಮಗಳ 2006 ರನ್ವಯ ನೇಮಕಾತಿ ಮಾಡಲು ಅಧಿಸೂಚಿಸಿ ಅರ್ಜಿಗಳನ್ನು ಸ್ವೀಕರಿಸಲು ದಿನಾಂಕ 04-07-2013 ರಂದು ಕೊನೆಯ ದಿನಾಂಕವೆಂದು ನಿಗದಿಪಡಿಸಲಾಗಿತ್ತು.

ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ಇವರು ದಿನಾಂಕ 28-07-2014ರ ಪತ್ರದಲ್ಲಿ ಅನುಚ್ಛೇಧ 371(ಜೆ)ಗೆ ಸಂಬಂಧಿಸಿದಂತೆ ಹೈದರಾಬಾದ್ - ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಾತಿಯನ್ನು ಕಲ್ಪಿಸುವ ಸಲುವಾಗಿ ಹೊರಡಿಸಲಾದ ದಿನಾಂಕ 06-11-2013ರ ಅಧಿಸೂಚನೆಯಂತೆ ಕ್ರಮ ಕೈಗೊಂಡು ಈಗಾಗಲೇ ಅಧಿಸೂಚಿಸಿರುವ ಪ್ರಾಂಶುಪಾಲರ ಹುದ್ದೆಗಳಿಗೆ ಹೈದರಾಬಾದ್ - ಕರ್ನಾಟಕ ಪ್ರದೇಶದ ಮೀಸಲಾತಿಯು ಅನ್ವಯವಾಗುವುದರಿಂದ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸುವ ಸಲುವಾಗಿ ಈಗಾಗಲೇ ಅಧಿಸೂಚಿಸಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರ 32 ಹುದ್ದೆಗಳನ್ನು ಹಿಂದಕ್ಕೆ ಪಡೆಯುವಂತೆ ಕೋರಿರುತ್ತಾರೆ. ಇವರ ಕೋರಿಕೆಯಂತೆ ದಿನಾಂಕ 20-06-2013ರ ಕರ್ನಾಟಕ ರಾಜ್ಯಪತ್ರದ ಭಾಗ-5 ರಲ್ಲಿ ಪ್ರಕಟವಾದ ಆಯೋಗದ ದಿನಾಂಕ 01-06-2013 ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ಅನುಕ್ರಮ ಸಂಖ್ಯೆ 123-154 ರಲ್ಲಿ ಪ್ರಕಟಿಸಲಾಗಿದ್ದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರ 32 ಹುದ್ದೆಗಳನ್ನು ಹಿಂಪಡೆಯಲಾಗಿದೆ.

ಮನೋಜ್ ಕುಮಾರ್ ಮೀನಾ,
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು

PR 85
SC 30

ಕರ್ನಾಟಕ ಲೋಕ ಸೇವಾ ಆಯೋಗ, " ಉದ್ಯೋಗ ಸೌಧ " ಬೆಂಗಳೂರು-560001

ತಿದ್ದುಪಡಿ ಅಧಿಸೂಚನೆ

ಸಂಖ್ಯೆ: ಇಪ (4) 326/2014-15/ಪಿಎಸ್‌ಸಿ, ಬೆಂಗಳೂರು, ದಿನಾಂಕ: 01-07-2014

2013ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳ ಫಲಿತಾಂಶವನ್ನು ಆಯೋಗದ ಅಧಿಸೂಚನೆ ಸಂಖ್ಯೆ: ಇಪ (1) 929/2013-14/ ಪಿಎಸ್‌ಸಿ, ದಿನಾಂಕ: 02-12-2013ರಂದು ಪ್ರಕಟಿಸಲಾಗಿದ್ದು, ಸದರಿ ಫಲಿತಾಂಶವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 23-01-2014ರಂದು ಪ್ರಕಟಿಸಲಾಗಿರುತ್ತದೆ. **ಶ್ರೀಮತಿ ಕಮಲಾ ಬಾಯಿ ಬೇಲಸುರೆ,** ಇವರು ಸದರಿ ಅಧಿವೇಶನದಲ್ಲಿ ಗುಲ್ಬರ್ಗಾ ಕೇಂದ್ರದಿಂದ ಅರ್ಜಿಯನ್ನು ಸಕಾಲದಲ್ಲಿ ಆಯೋಗಕ್ಕೆ ಸಲ್ಲಿಸಿ ಶುಲ್ಕ ಸಂದಾಯ ಮಾಡಿದ ದಾಖಲೆಯನ್ನು ಒದಗಿಸಿದ್ದ ಕಾರಣ ಇವರ ಮನವಿಯನ್ನು ಪರಿಗಣಿಸಿ ಇವರ ನೋಂದಣಿ ಸಂಖ್ಯೆ: 46201 ರಡಿಯ ಅಕೌಂಟ್ಸ್ ಹೈಯರ್ ವಿಷಯದ ಫಲಿತಾಂಶವನ್ನು ತಿದ್ದುಪಡಿಯ ಮುಖಾಂತರ ಸಂಬಂಧಿತರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಗುಲ್ಬರ್ಗಾ ಕೇಂದ್ರ

ಅಪೆಂಡಿಕ್ಸ್-'ಎ'

ಅಕೌಂಟ್ಸ್ ಹೈಯರ್

ಸಾಮಾನ್ಯ ದರ್ಜೆಯಲ್ಲಿ ಉತ್ತೀರ್ಣರಾದವರಡಿ ನೋಂದಣಿ ಸಂಖ್ಯೆ: 46164ರ ನಂತರ ಅಭ್ಯರ್ಥಿಯ ನೋಂದಣಿ ಸಂಖ್ಯೆ: 46201 ಅನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

ಮನೋಜ್ ಕುಮಾರ್ ಮೀನಾ,
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು.

PR 87
SC 25

ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು

ವಿಷಯ:- ಆಯೋಗವು ದಿನಾಂಕ:09-06-2013 ರಂದು ನಡೆಸಿದ ಅಬಕಾರಿ ಉಪನಿರೀಕ್ಷಕರ ಸ್ಪರ್ಧಾತ್ಮಕ ಪರೀಕ್ಷಾ ಸೂಚನೆಗಳ ಉಲ್ಲಂಘನೆ ಮತ್ತು ದಂಡನೆಯ ಕುರಿತು.

ಓದಲಾಗಿದೆ :- 1) ಈ ಕಛೇರಿಯ ನೋಟೀಸು ಸಂಖ್ಯೆ: ಇ(2) 72-98/14-15/ಪಿಎಸ್‌ಸಿ, ದಿನಾಂಕ:06-05-2014 ಮತ್ತು ಇ(2)222-232/ 2014-15/ಪಿಎಸ್‌ಸಿ, ದಿನಾಂಕ:23-05-2014.

2) ಅಭ್ಯರ್ಥಿಗಳ ಸಮಜಾಯಿಷಿ ದಿನಾಂಕ: ಶ್ರೀ ಮಧು ಬಿಸೇ.ಎನ್.ಸಿ (12–05–2014), ಶ್ರೀ ನರೇಶ.ವೈ (12–05–2014), ಶ್ರೀ ಮಲ್ಲನಗೌಡ (12–05–2014), ಶ್ರೀ ಧನಂಜಯ.ಬಿ.ಸಿ (12–05–2014), ಶ್ರೀಮತಿ ರಮ್ಯ.ಕೆ (13–05–2014), ಶ್ರೀ ತಿಪ್ಪೇಸ್ವಾಮಿ.ಹೆಚ್ (14–05–2014), ಶ್ರೀ ಜಯಶಂಕರ.ಎಂ (13–05–2014) ಶ್ರೀ ಹರೀಶಬಾಬು.ಎಸ್ (14–05–2014), ಶ್ರೀ ಸುನಿಲ್‌ಕುಮಾರ್ ಗೂಗಿಹಾಳ (14–05–2014), ಶ್ರೀ ಶಿವಾನಂದ ಮೇಲಸಕ್ರಿ (14–05–2014), ಶ್ರೀ ಮಧು.ಜಿ.ವಿ (15–05–2014), ಶ್ರೀ ಚರಣ (16–05–2014), ಶ್ರೀ ಮುಕ್ತಾರ ಪಾಷಾ (16–05–2014), ಶ್ರೀ ಸಕಲೇಶ್ವರ.ಎಸ್.ಹೆಚ್ (17–05–2014), ಶ್ರೀ ಸಿದ್ಧರಾಮ ಉಟಗಿ (19–05–2014), ಶ್ರೀ ಕಿರಣ.ಎಲ್ (19–05–2014), ಶ್ರೀ ಸುರೇಶಕುಮಾರ್.ಎಸ್ (26–05–2014), ಶ್ರೀ ಸಂತೋಷ ಕುಮಾರ.ಎ.ಜಿ. (29–05–2014), ಶ್ರೀ ರಾಜಶೇಖರ (30–05–2014), ಶ್ರೀ ಜಗದೀಶ.ಆರ್.ಬಿ (31–05–2014), ಶ್ರೀ ಬಸವರಾಜ ದಾಸರ (02–06–2014).

3) ಶ್ರೀ ಗಜೇಂದ್ರ.ಎನ್, ಶ್ರೀ ಉಮೇಶ, ಶ್ರೀ ವಿವೇಕಾನಂದ. ಸಿ, ಶ್ರೀ ಅಮಸಿದ್ಧ ಒಡೆಯರ್, ಇವರುಗಳ ಯಾವುದೇ ಸಮಜಾಯಿಷಿ ನೀಡಿರುವುದಿಲ್ಲ ಮತ್ತು ಶ್ರೀ ರಂಗಸ್ವಾಮಿ ಮತ್ತು ಶ್ರೀಮತಿ ಜ್ಯೋತಿ ಪಾಟೀಲ್, ಇವರುಗಳಿಗೆ ನೀಡಲಾದ ನೋಟೀಸ್‌ಗಳು ಆಯೋಗಕ್ಕೆ ಹಿಂದಿರುಗಿಸಲ್ಪಟ್ಟಿರುತ್ತವೆ.

4) ವಿಚಾರಣಾಧಿಕಾರಿಯವರ ವರದಿ ದಿನಾಂಕ:25–07–2014.

ಪ್ರಸ್ತಾವನೆ :

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ:09–06–2013 ರಂದು ನಡೆಸಿದ ಅಬಕಾರಿ ಉಪ ನಿರೀಕ್ಷಕರ ಸ್ಪರ್ಧಾತ್ಮಕ ಪರೀಕ್ಷೆಯ ಅಭ್ಯರ್ಥಿಗಳಾದ ಶ್ರೀ ಚರಣ (691344), ಶ್ರೀ ರಂಗಸ್ವಾಮಿ.ಟಿ.ಎಸ್ (624285), ಶ್ರೀ ಅಮೋಘಸಿದ್ಧ ಒಡೆಯರ (673265), ಶ್ರೀ ಶಿವಾನಂದ ಮೇಲಸಕ್ರಿ (677915), ಶ್ರೀಮತಿ ರಮ್ಯ.ಕೆ (613514), ಶ್ರೀ ಸಿದ್ಧರಾಮ ಉಟಗಿ (698671), ಶ್ರೀ ಮಧು ಬಿಸೇ.ಎನ್.ಸಿ (726792) ಶ್ರೀ ಮಧು.ಜಿವಿ (720620), ಶ್ರೀ ನರೇಶ.ವೈ (667431) ಶ್ರೀ ಜಗದೀಶ.ಆರ್.ಬಿ (606537), ಶ್ರೀ ಮುಕ್ತಾರ ಪಾಷಾ (695714), ಶ್ರೀ ಹರೀಶಬಾಬು. ಎಸ್ (619047), ಶ್ರೀ ಸುನಿಲ್‌ಕುಮಾರ ಗೂಗಿಹಾಳ (671818), ಶ್ರೀ ಕಿರಣ.ಎಲ್ (607335), ಶ್ರೀಮತಿ ಜ್ಯೋತಿ ಪಾಟೀಲ (699306), ಶ್ರೀ ಧನಂಜಯ.ಬಿ.ಸಿ (608548), ಶ್ರೀ ಜಯಶಂಕರ.ಎಂ (634296), ಶ್ರೀ ಸಕಲೇಶ್ವರ.ಎಸ್.ಹೆಚ್. (725134) ಶ್ರೀ ಸುರೇಶಕುಮಾರ.ಎಸ್ (631765), ಶ್ರೀ ವಿವೇಕಾನಂದ.ಸಿ (638023), ಶ್ರೀ ತಿಪ್ಪೇಸ್ವಾಮಿ.ಹೆಚ್ (660776), ಶ್ರೀ ಉಮೇಶ (690442), ಶ್ರೀ ರಾಜಶೇಖರ (695523), ಶ್ರೀ ಸಂತೋಷ ಕುಮಾರ.ಎ.ಜಿ (720237), ಶ್ರೀ ಮಲ್ಲನಗೌಡ (670108), ಶ್ರೀ ಬಸವರಾಜ ದಾಸರ (668007), ಶ್ರೀ ಗಜೇಂದ್ರ. ಎನ್ (623868) ಇವರುಗಳು ಪತ್ರಿಕೆ 1 (ಪ್ರಬಂಧ ಮತ್ತು ಭಾಷಾಂತರ) ಪತ್ರಿಕೆಯ ಉತ್ತರ ಹಾಳೆಗಳಲ್ಲಿ ಉತ್ತರಗಳನ್ನು ಹೊರತುಪಡಿಸಿ ಗುರುತುಗಳನ್ನು/ಕೋರಿಕೆಗಳನ್ನು ಬರೆದಿರುತ್ತಾರೆಂದು ತಿಳಿಸಿ ಮೌಲ್ಯಮಾಪಕರು ವರದಿ ನೀಡಿದಂತೆ ಪರೀಕ್ಷಾ ಸೂಚನೆಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿದ್ದ ಕಾರಣ ಉಲ್ಲೇಖ (1)ರಲ್ಲಿ ಓದಲಾದ ನೋಟೀಸುಗಳಿಗೆ ಉಲ್ಲೇಖ (2)ರಲ್ಲಿ ಓದಲಾದ ಅಭ್ಯರ್ಥಿಗಳು ನೀಡಿರುವ ಸಮಜಾಯಿಷಿಯಂತೆ ಮತ್ತು ಉಲ್ಲೇಖ (3)ರ ಅಭ್ಯರ್ಥಿಗಳು ಸಮಜಾಯಿಷಿ ನೀಡದ ಹಿನ್ನೆಲೆಯಲ್ಲಿ ಪ್ರಕರಣದ ಸತ್ಯಾಸತ್ಯತೆಯನ್ನು ಅರಿಯಲು ಆಯೋಗದ ದಿನಾಂಕ:24–06–2014ರ ಆದೇಶ ಸಂಖ್ಯೆ ಆಡಳಿತ:442/2014–15/ಪಿಎಸ್‌ಸಿ ರನ್ವಯ ವಿಚಾರಣೆಯನ್ನು ನಡೆಸಲು ನಿಶ್ಚಯಿಸಿ ಅದರಂತೆ ಮೇಲ್ಕಂಡ ಪ್ರಕರಣದ ವಿಚಾರಣೆಯನ್ನು ನಡೆಸಿ ವರದಿ ಸಲ್ಲಿಸಲು ಶ್ರೀ ಎ.ಆರ್.ರಂಗಸ್ವಾಮಿ, ಸಹಾಯಕ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಈ ಪ್ರಕರಣವನ್ನು ವಿಚಾರಣಾಧಿಕಾರಿಗಳ ಮುಂದೆ ಮಂಡಿಸಲು ಶ್ರೀ ಬಿ.ಆರ್. ಪರಮೇಶ್ವರಪ್ಪ, ಶಾಖಾಧಿಕಾರಿ, ಇವರನ್ನು ಅಭಿಯೋಕ್ತ ಅಧಿಕಾರಿಯನ್ನಾಗಿ ನಿಯುಕ್ತಿಗೊಳಿಸಲಾಗಿದ್ದು, ವಿಚಾರಣಾಧಿಕಾರಿಯವರು ಉಲ್ಲೇಖಿತ ದಿನಾಂಕ:25–07–2014ರ ವರದಿಯಲ್ಲಿ 06 ಅಭ್ಯರ್ಥಿಗಳಲ್ಲಿ ಶ್ರೀ ಅಮೋಘಸಿದ್ಧ ಒಡೆಯರ್ ಹಾಗೂ ಶ್ರೀ ವಿವೇಕಾನಂದ.ಸಿ ಇವರು ವಿಚಾರಣೆಗೆ ಹಾಜರಾಗಿದ್ದು, ಸದರಿ ಅಭ್ಯರ್ಥಿಗಳು ತಮ್ಮ ತಪ್ಪನ್ನು ಒಪ್ಪಿಕೊಂಡು ಲಿಖಿತ ತಪ್ಪೊಪ್ಪಿಗೆಯನ್ನು ನೀಡಿದ್ದು, ಇನ್ನುಳಿದ 04 ಅಭ್ಯರ್ಥಿಗಳು ವಿಚಾರಣೆಗೆ ಗೈರುಹಾಜರಾಗಿದ್ದಾಗ ತಿಳಿಸಿರುತ್ತಾರೆ. ದೃಢೀಕೃತ ವರದಿ ನೀಡಿರುವುದನ್ನು ಕೂಲಂಕಷ ಪರಿಶೀಲಿಸಿದ ನಂತರ, ಒಟ್ಟಾರೆ 27 ಅಭ್ಯರ್ಥಿಗಳಿಗೆ ಸೂಕ್ತ ದಂಡನೆ ವಿಧಿಸುವ ಬಗ್ಗೆ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ:ಇ(2)650/2014–15/ಪಿಎಸ್‌ಸಿ, ದಿನಾಂಕ:12–08–2014

ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ), ನಿಯಮಗಳು, 1978ರ ಉಪ ನಿಯಮ–20 ಮತ್ತು ಆಯೋಗದ ಅಧಿಕೃತ ಜ್ಞಾಪನ ಸಂಖ್ಯೆ:ಆಡಳಿತ/398/1993–94/ಪಿಎಸ್‌ಸಿ, ದಿನಾಂಕ:14–07–1993ರಲ್ಲಿ ಪ್ರದತ್ತವಾಗಿರುವ ಅಧಿಕಾರದ ಮೇರೆಗೆ ಅಬಕಾರಿ ಇಲಾಖೆಯಲ್ಲಿನ ಅಬಕಾರಿ ಉಪನಿರೀಕ್ಷಕರ ಹುದ್ದೆಗಳ ಅಭ್ಯರ್ಥಿಗಳಾದ ಶ್ರೀ ಚರಣ (691344), ಶ್ರೀ ರಂಗಸ್ವಾಮಿ.ಟಿ.ಎಸ್ (624285), ಶ್ರೀ ಅಮೋಘಸಿದ್ಧ ಒಡೆಯರ (673265), ಶ್ರೀ ಶಿವಾನಂದ ಮೇಲಸಕ್ರಿ (677915), ಶ್ರೀಮತಿ ರಮ್ಯ.ಕೆ (613514), ಶ್ರೀ ಸಿದ್ಧರಾಮ ಉಟಗಿ (698671), ಶ್ರೀ ಮಧು ಬಿಸೇ.ಎನ್.ಸಿ (726792) ಶ್ರೀ ಮಧು.ಜಿವಿ (720620), ಶ್ರೀ ನರೇಶ.ವೈ (667431) ಶ್ರೀ ಜಗದೀಶ.ಆರ್.ಬಿ (606537), ಶ್ರೀ ಮುಕ್ತಾರ ಪಾಷಾ (695714), ಶ್ರೀ ಹರೀಶಬಾಬು ಎಸ್ (619047), ಶ್ರೀ ಸುನಿಲ್‌ಕುಮಾರ ಗೂಗಿಹಾಳ (671818), ಶ್ರೀ ಕಿರಣ.ಎಲ್ (607335), ಶ್ರೀಮತಿ ಜ್ಯೋತಿ ಪಾಟೀಲ (699306), ಶ್ರೀ ಧನಂಜಯ.ಬಿ.ಸಿ (608548), ಶ್ರೀ ಜಯಶಂಕರ.ಎಂ (634296), ಶ್ರೀ ಸಕಲೇಶ್ವರ.ಎಸ್.ಹೆಚ್. (725134) ಶ್ರೀ ಸುರೇಶಕುಮಾರ್.ಎಸ್ (631765), ಶ್ರೀ ವಿವೇಕಾನಂದ.ಸಿ (638023), ಶ್ರೀ ತಿಪ್ಪೇಸ್ವಾಮಿ.ಹೆಚ್ (660776), ಶ್ರೀ ಉಮೇಶ (690442), ಶ್ರೀ ರಾಜಶೇಖರ (695523), ಶ್ರೀ ಸಂತೋಷ ಕುಮಾರ.ಎ.ಜಿ (720237), ಶ್ರೀ ಮಲ್ಲನಗೌಡ (670108), ಶ್ರೀ ಬಸವರಾಜ ದಾಸರ (668007), ಶ್ರೀ ಗಜೇಂದ್ರ ಎನ್ (623868) ಇವರುಗಳನ್ನು ಆಯೋಗವು ದಿನಾಂಕ:09–06–2013 ರಂದು ನಡೆಸಲಾದ ಅಬಕಾರಿ ಉಪನಿರೀಕ್ಷಕರ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯೂ ಅನ್ವಯಿಸಿದಂತೆ ಆಯೋಗವು ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆಗಳಿಂದ/ ನೇಮಕಾತಿಗಳಿಂದ ಎರಡು ವರ್ಷಗಳ ಅವಧಿಗೆ ಡಿಬಾರ್ ಮಾಡುವ ದಂಡನೆಯನ್ನು ಈ ಮೂಲಕ ವಿಧಿಸಿದೆ.

ಮನೋಜ್ ಕುಮಾರ್ ಮೀನಾ ಭಾ.ಆ.ಸೇ.,
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು–560 001.

ಇವರಿಗೆ

1) Sri Charana
S/o Bhoja Poojary
Suvarna Nilaya, Kuchoor Post,
Hebri Via, Karkala Tq,
Udupi Dist-576112.

2) Sri Rangaswamy.T.S
S/o Shivaiah Chari
No. 1014, 10th Block,
Frazer Town Police Quatres, Lazar Road
Bangalore-560005

3) Sri Amoghasidda Odeyar
S/o Chanabasappa
At Post Kakamari,
Tq: Athani, Dist: Belgaum-591265.

4) Sri Shivanand K.Melasakri
S/o Kantappa
At/ Po Dannaragi,
Tq: Bijapur, Dist: Bijapur-586130.

5) Smt Ramya.K
D/o Keshavamurthy.T.H
No.673, 4th Cross, 6th Main,
Group D Layout, Sree Gandada Kavalu,
Sunkadakatte, Bangalore-560091.

6) Sri Siddaharam Utagi
S/o Gurubasappa
At/Po Loni.B.K,
Tq: Indi, Dist: Bijapur-586204

7) Sri Madhu Bise.N.C
S/o Chandrappa.M
Marigondanahalli Village, Kotehal Post,
Honnali Tq, Davanagere Dist 577001.

8) Sri Madhu.G.V
S/o Vijayendrappa
Kathige At/Post, Honnali Tq,
Davanagere Dist- 577223.

9) Sri Naresh Y
S/o Nagaraj.Y
Old Andral, Near Sunkalamma
Temple Right Side, 9th Ward,
Bellary Tq & Dist-583109.

10) Sri Jagadeesh.R.B
S/o Balaraju.R.G
Thoreramanahalli,
Adarangi Post, Kudur Hobli, Magadi Tq,
Ramanagar Dist: 561101.

11) Sri Mukhtar Pasha
S/o Abdul Gafoor Peshamam
SBI Main Raod, Kembhavi,
Tq: Shorapur, Dist: Yadgir-585216

12) Sri Harish Babu.S
S/o Siddappa. M
Marakalaghatta Village,
O Mittur Post, Mulbagal Tq,
Kolar Dist-563127.

13) Sri Sunil Kumar Gugihal
S/o Shiddappa
At Post Sunag, Tq-Bilagi,
Dist-Bagalkot-587116.

14) Sri Kiran.L
S/o Lokanaik
Hosahalli Village, Kanivebilachi Post,
Basavapattana Hobli, Channagiri Taluk,
Davangere District-577231.

15) Smt Jyoti Patil
D/o Prakash
C/o Baburao Jadhav,
Lalgeri, Near Masjeed Brahmpur Urdu School,
Gulbarga-585103.

16) Sri Dhananjaya.B.C
S/o Channegowda
Near GHP School Main Road,
Belavadi Post, Chikmagalur
Tq & Dist-577146.

17) Sri layashankara.M
S/o Mahadevappa.S
1/164, New Street, Old Bangalore Road, Kollegal,
Chamarajanagar (Dist)-571440.

18) Sri Sakaleswara.S.H
S/o Honnappa.H
Gowdara Beedi, Nallur Post, Nallur,
Channagiri, Channagiri Tq,
Davanagere Dist-577221.

19) Sri Suresha Kumara.S
S/o Sundara Raju.M
Kanchally (V), Basappanadoddi Post,
Kollegal Taluk,
Chamarajanagar District-571439.

20) Sri Vivekananda.C
S/o Chandrashekara
Dadadakallahally
(Post & Village), Yelwala Hobli,
Mysore Tq & District-571130

21) Sri Thippeswamy.H
S/o Marappa
Thonasigeri Village,
Yaradammanahalli Post,
Sandur Tq, Bellary Dist-583112.

22) Sri Umesh
S/o Chandrakanth Sherikar
At Post: Sultanabad,
Tq: Humnabad, Dist: Bidar-585418.

23) Sri Rajshekar
S/o Annaraya
At Zapur, Post: Pala,
Tq: Gulbarga, Dist: Gulbarga-595229.

24) Sri Santhosh Kumar.A.G
S/o Choudappa
#336, S.M.Krishna Nagar,
Kondajji Road, Davanagere-577006.

25) Sri Mallanagoud
S/o Hanamagoud Police Patil
At Madanal, Post Yaragera,
Tq Kustagi, Dist: Koppal-583281.

26) Sri Basavaraj Dasar
S/o Churchappa
At Post Anawal, Tq: Badami, Dist:
Bagalkot-587206.

27) Sri Gajendra.N
S/o Narayanappa
Adakimaranahalli, Makali Post,
Dasanapura Hobli, Bangalore
North-562123

ಮನೋಜ್ ಕುಮಾರ್ ಮೀನಾ ಭಾ.ಆ.ಸೇ.,
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ,
ಬೆಂಗಳೂರು–560 001.

PR-80
SC-30

FORM-I

(See Rule 9)

Education Department

Office of the Deputy Director of Public Instructions, Gadag

NOTIFICATION

Sri. S.F. HARIJAN Working as Assistant Teacher in the Education Department of Office of KVSR Comp. Jr. College, Gadag is permitted to change his name to **S.F. SOMASAGAR.**

PD C/n. 107
SC - 10

Deputy Director
Public Instructions Department, Gadag.

OFFICE OF THE SERVICES LAW REPORT (KAT) COUNCIL, KANDAYA BHAVAN, 7TH FLOOR, K.G.ROAD, BANGALORE-09.

NOTIFICATION

No.S.L.R. (KAT)C/ APT /E&A.E/3/2008-09 dated 16th September 2014

Sub: Appointment to the post of Editor of Karnataka Services Law Journal (Part Time), Karnataka Administrative Tribunal.

Applications are invited from the Advocates who possess qualification prescribed under the Services Law Report (KAT) Rules, 1987 for nomination as Editor (Part Time), as per the proforma enclosed. The applications shall be addressed to the Member-Secretary, Services Law Report (KAT) Council, 7th Floor, Kandaya Bhavan, K.G.Road, Bangalore-560 009, so as to reach the Member-Secretary not later than 10.10.2014.

Qualification prescribed for the post of Editor, remuneration, number of posts, method of recruitment and minimum qualification under Services Law Report (KAT) Rules, 1987, as set out in the Government Order No. SiAaSuE 52 SeAaNya 88, Bangalore dated: 10th March 1989, is as follows:-

Sl. No.	Category of Posts	No. of posts	Method of Recruitment	Qualification
1	2	3	4	5
1	Editor	1	By nomination by the Council, for a period of three years at a time.	Must have put in not less than seven years of service at the Bar.

METHOD OF NOMINATION:-

1. Nomination shall be on the basis of the results of the aptitude test, qualification and experience of the candidate.

1 (a) In the aptitude test the candidate shall be asked to prepare head notes to two judgments/orders rendered by Karnataka Administrative Tribunal/High Court of Karnataka.

2 The remuneration payable is at Rs.8,000/- p.m.

3 The person nominated as Editor is required to visit the office of the Services Law Report (KAT) Council, 7th Floor, Kandaya Bhavan, K.G.Road, Bangalore-560 009, at least once in a week, on the working days, during the working hours and collect copies of judgments, and return the same after editing, with suitable Head-notes, as expeditiously as possible.

By Order of the Hon'ble Chairman
SLR (KAT) Council,

M. MAHADEVAIAH,
Member-Secretary.

PROFORMA

To:

The Member-Secretary,
Services Law Report (KAT) Council,
7th Floor, Kandaya Bhavan, K.G.Road, Bangalore-09.

Sir,

I am willing to be considered for appointment to the post of Editor (Part Time) under the Services Law Report (KAT) Rules, 1987, and offer myself as a candidate for the said post, with the following particulars:-

1	Name and Address	
2	Father's Name	
3	Age and Date of Birth	
4	Qualification*	
5	Whether of sound health and active habits and free from any bodily defect or infirmity which makes him unfit for such part time appointment	
6	Date of Enrolment as Advocate	
7	Total period of practice at the Bar	
8	Present assignments, if any, as legal Adviser	
9	Special Qualifications and Activities if any, like publication of Books, etc.	
10	Previous Experience, if any, having worked as Law Reporter, I.L.R. (KAT) Under the Karnataka Law Reports Service Rules, 1972, or any other Journal.	
11	Any other information	

Bangalore Yours faithfully,

Dated: Signature.

Note: *Enclosures to be furnished along with letter of willingness.

1. Necessary proof regarding age, (S.S.L.C. Certificate), Qualifications, Practice at the Bar, to be furnished along with the application. Copies of originals properly attested need only be furnished.
2. Necessary Certificate Reg. Practice.
3. Personal Declaration as to present assignments, if any.

PR. 94
SC. 50

ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560 001.

ಅಧಿಸೂಚನೆ

ಸಂಖ್ಯೆ: ಪಿಎಸ್‌ಸಿ 1 ಆರ್‌ಟಿ(4)ಬಿ–1/2014, ದಿನಾಂಕ: 25–09–2014

1. ಆಯೋಗವು ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ)(ಸಾಮಾನ್ಯ) ನಿಯಮಗಳು 2006 ಮತ್ತು 2013ರ ತಿದ್ದುಪಡಿ ನಿಯಮಗಳಡಿಯಲ್ಲಿ ಕೆಳಕಂಡ ಗ್ರೂಪ್– 'ಎ', 'ಬಿ' ಮತ್ತು 'ಸಿ' ತಾಂತ್ರಿಕ / ತಾಂತ್ರಿಕೇತರ ಹುದ್ದೆಗಳನ್ನು ಭರ್ತಿ ಮಾಡಲು ON-LINE ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ:–

ಭಾಗ–1

ಕ್ರಮ ಸಂಖ್ಯೆ	ಇಲಾಖೆಯ ಹೆಸರು ಮತ್ತು ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ		ಒಟ್ಟು ಹುದ್ದೆಗಳ ಸಂಖ್ಯೆ
		ರಾಜ್ಯ ವೃಂದದ ಹುದ್ದೆಗಳು	ಹೈದರಾಬಾದ್ – ಕರ್ನಾಟಕ ಹುದ್ದೆಗಳು	
(1)	(2)	(3)	(4)	(5)
ಗ್ರೂಪ್–'ಎ' ಹುದ್ದೆಗಳು				
1	ವಾರ್ತಾ ಇಲಾಖೆಯಲ್ಲಿ ಹಿರಿಯ ಸಹಾಯಕ ನಿರ್ದೇಶಕರು	03	–	03
ಗ್ರೂಪ್–'ಬಿ' ಹುದ್ದೆಗಳು				
2	ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರು	39	11	50
3	ರೇಷ್ಮೆ ಇಲಾಖೆಯಲ್ಲಿ ಸಹಾಯಕ ಅಭಿಯಂತರರು (ಸಿವಿಲ್)	01 (ಬ್ಯಾಲಾ)	–	01
4	ಔಷಧ ನಿಯಂತ್ರಣ ಇಲಾಖೆಯ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರು(ಫಾರ್ಮಾಕಾಗ್ನಸಿ)	01 (ಬ್ಯಾ.ಲಾ)	–	01
5	ಔಷಧ ನಿಯಂತ್ರಣ ಇಲಾಖೆಯ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರು(ಫಾರ್ಮಾಸ್ಯುಟಿಕ್ಸ್)	01 (ಬ್ಯಾ.ಲಾ)	–	01
ಗ್ರೂಪ್–'ಸಿ' ಹುದ್ದೆಗಳು				
6	ವಾರ್ತಾ ಇಲಾಖೆಯಲ್ಲಿ ವಾರ್ತಾ ಸಹಾಯಕರು	07	03	10
ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ವಿವಿಧ ವಿಷಯಗಳಲ್ಲಿ ಬೋಧಕ / ಬೋಧಕೇತರ ಹುದ್ದೆಗಳು				
7	ಕನ್ನಡ ಭಾಷಾ ಶಿಕ್ಷಕರು	39	11	50
8	ಆಂಗ್ಲ ಭಾಷಾ ಶಿಕ್ಷಕರು	39	11	50
9	ಹಿಂದಿ ಭಾಷಾ ಶಿಕ್ಷಕರು	39	11	50
10	ಉರ್ದು ಶಿಕ್ಷಕರು	39	11	50
11	ಗಣಿತ ಶಿಕ್ಷಕರು	39	11	50
12	ಸಾಮಾನ್ಯ ವಿಜ್ಞಾನ ಶಿಕ್ಷಕರು	39	11	50
13	ಸಮಾಜ ವಿಜ್ಞಾನ ಶಿಕ್ಷಕರು	39	11	50
14	ದೈಹಿಕ ಶಿಕ್ಷಕರು	39	11	50
15	ಗಣಕ ಯಂತ್ರ ಶಿಕ್ಷಕರು	39	11	50
16	ಆರ್ಟ್ ಅಂಡ್ ಕ್ರಾಫ್ಟ್ ಶಿಕ್ಷಕರು	39	11	50
17	ಪ್ರಥಮ ದರ್ಜೆ ಗಣಕ ಯಂತ್ರ ಸಹಾಯಕರು	39	11	50
18	ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿಲಯಪಾಲಕರು	39	11	50
19	ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳ ನಿಲಯಪಾಲಕರು (ಪುರುಷ)	24	14	38
20	ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳ ನಿಲಯಪಾಲಕರು (ಮಹಿಳೆ)	38	18	56
21	ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಮೇಲ್ವಿಚಾರಕರು (ಪುರುಷ)	16	11	27
22	ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ ಮೇಲ್ವಿಚಾರಕರು (ಮಹಿಳೆ)	26	13	39
23	ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಮಹಿಳಾ ಶುಶ್ರೂಷಕಿಯರು	06	01	07

24	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸಹಾಯಕ ಗ್ರಂಥಪಾಲಕರು	01	–	01
25	ವಾರ್ತಾ ಇಲಾಖೆಯಲ್ಲಿ ಸ್ವಾಗತಗಾರರು ಹಾಗೂ ಗ್ರಂಥಪಾಲಕರು	06	01	07
26	ಸಹಕಾರ ಇಲಾಖೆಯಲ್ಲಿನ ಸಹಕಾರ ಸಂಘಗಳ ನಿರೀಕ್ಷಕರು	39	11	50

ಭಾಗ–2

ಹಾಗೂ ವಿಶೇಷ ನೇಮಕಾತಿ ನಿಯಮಗಳು 2001 ಜಾರಿಯಾದ ಸಮಯದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳೆಂದು ಗುರುತಿಸಲಾದ ಈ ಕೆಳಕಂಡ ಗ್ರೂಪ್ 'ಎ' ಹುದ್ದೆಗಳನ್ನು ಸದರಿ ವಿಶೇಷ ನಿಯಮಗಳಂತೆ ಭರ್ತಿ ಮಾಡಲು ON-LINE ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ:–

ಕ್ರಮ ಸಂಖ್ಯೆ	ಇಲಾಖೆ ಮತ್ತು ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
01	ಆಯುಷ್ ಇಲಾಖೆಯಲ್ಲಿ ವೈದ್ಯಾಧಿಕಾರಿ(ಯುನಾನಿ) ಬ್ಯಾಕ್‌ಲಾಗ್ ಹುದ್ದೆಗಳು	09
02	ಆಯುಷ್ ಇಲಾಖೆಯಲ್ಲಿ ವೈದ್ಯಾಧಿಕಾರಿಗಳ (ಪ್ರಕೃತಿ ಚಿಕಿತ್ಸೆ ಮತ್ತು ಯೋಗ) ಬ್ಯಾಕ್‌ಲಾಗ್ ಹುದ್ದೆ	01

ಸೂಚನೆ: ಆಯೋಗದ ದಿನಾಂಕ 01–06–2013 ರ ಅಧಿಸೂಚನೆಗೆ ಅನುಗುಣವಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿನ ಪ್ರಾಂಶುಪಾಲರ ಹುದ್ದೆಗೆ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಿದ ಅಭ್ಯರ್ಥಿಗಳು ಮತ್ತೆ ಅರ್ಜಿ ಸಲ್ಲಿಸಬೇಕು. ಆದರೆ, ಶುಲ್ಕ ಪಾವತಿಸುವಂತಿಲ್ಲ. ಶುಲ್ಕ ಪಾವತಿಸಿದ ವಿವರವನ್ನು ಅರ್ಜಿಯ ನಿಗದಿತ ಸ್ಥಳದಲ್ಲಿ ನಮೂದಿಸಿ ಚಲನ್ ಅನ್ನು ಅಪ್ ಲೋಡ್ ಮಾಡಬೇಕು.

* **ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 25–09–2014**
* **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25–10–2014 (ಮಧ್ಯಾಹ್ನ 01–00 ಘಂಟೆಗೆ)**
* **ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 25–10–2014 (ಅಂಚೆ ಕಛೇರಿಯ ಕಾರ್ಯದ ವೇಳೆಯೊಳಗೆ)**
* **ಪರೀಕ್ಷಾ ವೇಳಾ ಪಟ್ಟಿಗೆ ಸಂಬಂಧಿಸಿದ ಮಾಹಿತಿಯು ಇದೇ ಅಧಿಸೂಚನೆಯ ಪುಟ ಸಂಖ್ಯೆ 22 ರಿಂದ 24 ರಲ್ಲಿ ಲಗತ್ತಿಸಿರುವ ಅನುಬಂಧ–1 ರಲ್ಲಿ ತೋರಿಸಲಾಗಿದೆ.**

ಟಿಪ್ಪಣಿ: ಅನುಸೂಚಿಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

ವಿಶೇಷ ಸೂಚನೆ:– ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ, ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸತಕ್ಕದ್ದು.

ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು, ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆಯಿಲ್ಲದೇ ತಿರಸ್ಕರಿಸಲಾಗುವುದು.

ಅರ್ಜಿಗಳನ್ನು ಆನ್–ಲೈನ್ (ON-LINE) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

1) ಅಭ್ಯರ್ಥಿಗಳು On-Line ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಕಡ್ಡಾಯವಾಗಿ ನೀಡಿರುವ ಸೂಚನೆಗಳನ್ನು ಓದತಕ್ಕದ್ದು ಹಾಗೂ ನೀಡಿರುವ ಸೂಚನೆಗಳನ್ವಯ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

2) ಅಭ್ಯರ್ಥಿಗಳು ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಆಯೋಗವು ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.

ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು:–

GM-General Merit	**ST-Scheduled Tribe**
C-I-Category I	**Ex-MP-Ex-Military Person**
2A-Category 2A	**Rural-Rural Reservation**
2B-Category 2B	**KMS-Kannada Medium Student**
3A-Category 3A	**PDP-Project Displaced Person**
3B-Category 3B	**PH-Physically Handicapped**
SC-Scheduled Caste	

2. **ಶುಲ್ಕ:–**

ಸಾಮಾನ್ಯ ಅರ್ಹತೆ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ	₹: 300/–
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ	₹: 25/–

ಸೂಚನೆ:– (ಅ)ಆಯೋಗದ ದಿನಾಂಕ 01–06–2013 ರ ಅಧಿಸೂಚನೆಗೆ ಅನುಗುಣವಾಗಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರ ಹುದ್ದೆಗೆ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಿದ ಅಭ್ಯರ್ಥಿಗಳು ಶುಲ್ಕ ಪಾವತಿಸುವಂತಿಲ್ಲ. ಶುಲ್ಕ ಪಾವತಿಸಿದ ವಿವರಗಳನ್ನು ಅರ್ಜಿಯಲ್ಲಿ ತಪ್ಪದೇ ನಮೂದಿಸಿ ಹಿಂದೆ ಸಿಂಡಿಕೇಟ್ ಬ್ಯಾಂಕ್ ರಲ್ಲಿ ಶುಲ್ಕ ಪಾವತಿಸಿದ ಚಲನ್ ಅನ್ನು ಅಪ್‌ಲೋಡ್ ಮಾಡತಕ್ಕದ್ದು.

(ಆ) ಭಾಗ–2 ರಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯನ್ನು 2001 ರ ವಿಶೇಷ ನೇಮಕಾತಿ ನಿಯಮಗಳಂತೆ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಶೇಕಡವಾರು ಅಂಕಗಳು ಹಾಗೂ ವಯೋಮಿತಿಯ ಆಧಾರದಂತೆ ಮಾಡಲಾಗುವುದರಿಂದ ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಯಾವುದೇ ಶುಲ್ಕವನ್ನು ಪಾವತಿಸುವಂತಿಲ್ಲ.

2.1 ನಿಗದಿತ ಶುಲ್ಕವನ್ನು ಕರ್ನಾಟಕದ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ ಪಾವತಿ ಮಾಡಬಹುದು. ಇದನ್ನು ಹೊರತುಪಡಿಸಿ ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಪಾವತಿಸದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

3. ಅಭ್ಯರ್ಥಿಗಳು ONLINE ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು.

ಹಂತ 1:– ಅಭ್ಯರ್ಥಿಗಳು ಆಯೋಗದ ಅಧಿಕೃತ ವೈಬ್‌ಸೈಟ್ "http://kpsc.kar.nic.in"ನ್ನು ತೆರೆದ ಕೂಡಲೇ ಕಂಪ್ಯೂಟರ್ ಪರದೆಯ ಮೇಲೆ 'Application For Technical /Non Technical /Backlog Posts ' ಎಂದು ಮೂಡುತ್ತದೆ. ಇದನ್ನು ಒತ್ತಿದ್ದಲ್ಲಿ ಪರದೆಯಲ್ಲಿ ಅಧಿಸೂಚಿಸಿದ ಹುದ್ದೆಗಳು ಲಭ್ಯವಾಗುತ್ತದೆ. ಇದಲ್ಲದೆ, ಪರದೆಯಲ್ಲಿ ಅಧಿಸೂಚನೆ, ಭಾವ ಚಿತ್ರ ಮತ್ತು ಸಹಿಯನ್ನು ಹಾಗೂ ಇತರೆ ದಾಖಲಾತಿಗಳನ್ನು ಅಪ್ಲೋಡ್ ಮಾಡುವ ಲಿಂಕ್‌ಗಳು ಮೂಡುತ್ತವೆ. ಅರ್ಜಿಯ ದ್ವಿತೀಯ ಪ್ರತಿಯನ್ನು ಪಡೆಯುವ ಸೌಲಭ್ಯವು ಮೂಡುತ್ತದೆ. ಅರ್ಜಿ ಭರ್ತಿ ಮಾಡುವ ಮುನ್ನ ಅಧಿಸೂಚನೆ / ಪರೀಕ್ಷಾ ಶುಲ್ಕ ಇತ್ಯಾದಿ ವಿವರಗಳು ಲಭ್ಯವಾಗಲಿದ್ದು, ಅಭ್ಯರ್ಥಿಗಳು ಅಧಿಸೂಚನೆಯಲ್ಲಿನ ವಿವರಗಳನ್ನು ಮತ್ತು ಅರ್ಜಿ ಸಲ್ಲಿಸುವ ಸೂಚನೆಗಳನ್ನು ತಪ್ಪದೇ ಓದಿಕೊಂಡು ಅದರಂತೆ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

ಹಂತ 2:– ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಭ್ಯರ್ಥಿಯು ತನ್ನ ಇತ್ತೀಚೆಗಿನ ಭಾವಚಿತ್ರವನ್ನು ಒಂದು ಸ್ವಚ್ಛವಾದ ಬಿಳಿಯ ಹಾಳೆಯ ಮೇಲೆ ಲಗತ್ತಿಸಿ ಅದರ ಕೆಳಗೆ ಕಪ್ಪು ಶಾಯಿಯ ಸ್ಕೆಚ್/ಮಾರ್ಕರ್ ಪೆನ್ನಿನಿಂದ ಸಹಿಯನ್ನು ಮಾಡಿ (ಯಾವುದೇ ಕಾರಣಕ್ಕೂ ಭಾವ ಚಿತ್ರದ ಮೇಲೆ ಸಹಿ ಮಾಡಬಾರದು) ನಂತರ ಭಾವಚಿತ್ರ (Photo) ಮತ್ತು ಸಹಿಯನ್ನು ಒಳಗೊಂಡಂತೆ ಈ ಕೆಳಗಿನ ಅಳತೆ ಪ್ರಕಾರ ಸ್ಕ್ಯಾನ್ ಮಾಡಿ ಇಟ್ಟುಕೊಂಡಿರತಕ್ಕದ್ದು.

○ **ಫೈಲ್ ಅಳತೆ<100 ಕೆಬಿ**	**ಪಾಸ್ ಪೋರ್ಟ್ ಭಾವಚಿತ್ರದ ಅಳತೆಗಳು:**
○ **ಡಿಪಿಐ ಹಿನ್ನೆಲೆ=100 ಡಿಪಿಐ**	**45 ಎಂ.ಎಂ (ಉದ್ದ) X 35 ಎಂ.ಎಂ (ಅಗಲ)**
○ **ಇಮೇಜ್ ಅಳತೆ=100%**	**ಸಹಿ ಅಳತೆ:**
○ **ಕಲರ್**	**20ಎಂ.ಎಂ (ಉದ್ದ) X 35 ಎಂ.ಎಂ (ಅಗಲ)**
○ **ಪಿಎನ್‌ಜಿ(png)/ಜೆಪಿಇಜಿ (jpeg)**	

ಹಂತ 3:– ಸಂಬಂಧಪಟ್ಟ ಹುದ್ದೆಯ ಮೇಲೆ ಕ್ಲಿಕ್ ಮಾಡಿದ್ದಲ್ಲಿ ಪರದೆಯಲ್ಲಿ ಈಗಾಗಲೇ ಅರ್ಜಿ ಸಲ್ಲಿಸಿದ್ದೀರಾ ಅಥವಾ ಇಲ್ಲವಾ ಎಂಬ ಪ್ರಶ್ನೆ ಮೂಡುತ್ತದೆ. ಒಂದು ವೇಳೆ ಈಗಾಗಲೇ ಅರ್ಜಿ ಸಲ್ಲಿಸಿದ್ದಲ್ಲಿ ಅಭ್ಯರ್ಥಿಗೆ ನೀಡಲಾದ Control ID ಯನ್ನು ಮತ್ತು ಜನ್ಮ ದಿನಾಂಕವನ್ನು ಭರ್ತಿ ಮಾಡಿ Next button ಅನ್ನು ಒತ್ತಬೇಕು. ಆಗ, ಈಗಾಗಲೆ ಭರ್ತಿ ಮಾಡಲಾದ ವೈಯುಕ್ತಿಕ ವಿವರಗಳು ಮೂಡುತ್ತದೆ. ಅಭ್ಯರ್ಥಿ ಅವರ ಮೀಸಲಾತಿ/ವಿದ್ಯಾರ್ಹತೆ/ಇತ್ಯಾದಿ ವಿವರಗಳನ್ನು ಮಾತ್ರ ಭರ್ತಿ ಮಾಡಬೇಕು. ಅರ್ಜಿಯನ್ನು ಭರ್ತಿ ಮಾಡಿದ ನಂತರ Preview button ಅನ್ನು ಒತ್ತಬೇಕು. ಆಗ ಭರ್ತಿ ಮಾಡಿರುವ ಎಲ್ಲಾ ವಿವರಗಳು ಮೂಡುತ್ತವೆ. ಈ ವಿವರಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಬೇಕು. ಅರ್ಜಿಯಲ್ಲಿ ನಮೂದಿಸಿರುವ ವಿವರಗಳಲ್ಲಿ ಏನಾದರೂ ತಪ್ಪುಗಳಾಗಿದ್ದಲ್ಲಿ ಅದನ್ನು ಸರಿಪಡಿಸಲು Edit Details button ಅನ್ನು ಒತ್ತಿ ಅಗತ್ಯ ತಿದ್ದುಪಡಿಗಳನ್ನು ಮಾಡಬಹುದು. 'Submit' button ಅನ್ನು ಒತ್ತಿದ ಮೇಲೆ ಯಾವುದೇ ತಿದ್ದುಪಡಿಗಳನ್ನು ಮಾಡಲು ಅವಕಾಶ ಇರುವುದಿಲ್ಲ. ಅರ್ಜಿಯನ್ನು ಭರ್ತಿ ಮಾಡಿದ ನಂತರ ಮೇಲೆ ಕ್ಲಿಕ್ ಮಾಡಿದಲ್ಲಿ ಮುಂದಿನ ಪರದೆ ಮೂಡುತ್ತದೆ. Application ID/Control ID ಮೂಡಲಿದ್ದು ಇವುಗಳನ್ನು ಮುಂದಿನ ಕಾರ್ಯಗಳಿಗೆ ಬರೆದಿಟ್ಟುಕೊಳ್ಳತಕ್ಕದು.

ಹಂತ 4:– ನಂತರ Documents Upload button ಅನ್ನು ಒತ್ತಿ ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಭಾವಚಿತ್ರ (Photo) ಮತ್ತು ಸಹಿಯನ್ನು upload ಮಾಡತಕ್ಕದ್ದು.

- ಪ್ರಾಂಶುಪಾಲರ ಹುದ್ದೆಗೆ ದಿ: 01–06–13 ರ ಅಧಿಸೂಚನೆಗೆ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಿದ ಅಭ್ಯರ್ಥಿಗಳು ಶುಲ್ಕ ಪಾವತಿಯ ಚಲನ್ ಅನ್ನು upload ಮಾಡತಕ್ಕದು.
- ಇದಲ್ಲದೆ ಪ್ರಾಂಶುಪಾಲರ/ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ಕೃಪಾಂಕ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಅನುಬಂಧದಲ್ಲಿ ನೀಡಲಾದ ಸೇವಾ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಸಹಿ ಪಡೆದು upload ಮಾಡತಕ್ಕದು ತಪ್ಪಿದ್ದಲ್ಲಿ ಇವರಿಗೆ ಕೃಪಾಂಕ ನೀಡಲಾಗುವುದಿಲ್ಲ.

Photo & Signature ಮತ್ತು ಅಗತ್ಯ ದಾಖಲೆಗಳನ್ನು upload ಮಾಡಿದ ನಂತರ ಅರ್ಜಿಯಲ್ಲಿ Download application button ಅನ್ನು ಒತ್ತಿ ಅರ್ಜಿಯ Preview ಮತ್ತು ಶುಲ್ಕ ಪಾವತಿಸಲು Challan ಅನ್ನು Download ಮಾಡಿ ಕೊಳ್ಳತಕ್ಕದ್ದು

ಹಂತ 5: Application Preview ಮತ್ತು Challan ಅನ್ನು Download ಮಾಡಿಕೊಂಡು ಕರ್ನಾಟಕದ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ ಶುಲ್ಕವನ್ನು ಪಾವತಿಸಬೇಕು. ಅರ್ಜಿಯ ಪ್ರತಿಯನ್ನು ಮತ್ತು ಶುಲ್ಕ ಸಂದಾಯ ಮಾಡಿದ ಚಲನ್/ ವಿವರಗಳನ್ನು ಕಡ್ಡಾಯವಾಗಿ ಅಭ್ಯರ್ಥಿಗಳು ತಮ್ಮೊಂದಿಗೆ ಇಟ್ಟುಕೊಳ್ಳತಕ್ಕದ್ದು. ಆಯೋಗವು ಅಪೇಕ್ಷಿಸಿದಾಗ ಈ ಚಲನ್/ವಿವರಗಳನ್ನು ಹಾಜರುಪಡಿಸಬೇಕು.

ನಿಗದಿಪಡಿಸಿದ ಕೊನೆಯ ದಿನಾಂಕ / ಸಮಯದ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗುವುದು.

3.1 ಅಭ್ಯರ್ಥಿಗಳು ತಮ್ಮ ಅರ್ಜಿ ಸ್ವೀಕೃತವಾಗಿರುವ ಬಗ್ಗೆ ತಿಳಿಯಬೇಕಾದಲ್ಲಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ 02 ದಿನಗಳ ತರುವಾಯ, Check Status ಲಿಂಕಿನಲ್ಲಿ ಮಾಹಿತಿಗಳನ್ನು ದಾಖಲಿಸಿ, ಅರ್ಜಿಯು ಸ್ವೀಕರಿಸಲಾಗಿರುವ ಬಗ್ಗೆ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ತಮ್ಮ ಅರ್ಜಿಯ ಮಾಹಿತಿ ದೊರೆಯದಿದ್ದಲ್ಲಿ ನೀವು ಪಾವತಿಸಿರುವ ಶುಲ್ಕದ ಚಲನ್ /ವಿವರಗಳೊಂದಿಗೆ ಅಂಚೆ ಕಛೇರಿಯ ಅಂತರ್ಜಾಲದಲ್ಲಿ / ಆನ್‌ಲೈನ್ ಅರ್ಜಿ ಸ್ವೀಕರಿಸುತ್ತಿರುವ ಸಂಸ್ಥೆಯ Helpline ಅನ್ನು ಸಂಪರ್ಕಿಸಬಹುದು.

3.2 ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

ವಿಶೇಷ ಸೂಚನೆ: On-line ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line) 9900998454 ಮತ್ತು 9900998458 ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

4. ಅರ್ಹತಾ ಷರತ್ತುಗಳು:–

ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

ಆ) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

ಇ) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

ಈ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾಯ್ದಿರಿಸಿಕೊಂಡಿದೆ ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

5. ಭಾಗ– 1 ರಲ್ಲಿ ಅಧಿಸೂಚಿಸಿದ ತಾಂತ್ರಿಕ / ತಾಂತ್ರಿಕೇತರ ಹುದ್ದೆಗಳ ನೇಮಕಾತಿ ವಿಧಾನ (ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಆಯ್ಕೆ):–

5 (1) ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ:–

ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ರಲ್ಲಿ ನಿರ್ದಿಷ್ಟಪಡಿಸಲಾದಂತೆ, ಅಧಿಸೂಚಿಸಲಾಗಿರುವ ಯಾವುದೇ ತಾಂತ್ರಿಕ/ ತಾಂತ್ರಿಕೇತರ ಹುದ್ದೆಗಳ ಸಂದರ್ಶನಕ್ಕೆ ಅರ್ಹರಾಗಲು ಅಭ್ಯರ್ಥಿಗಳು ಆಯೋಗ ನಡೆಸುವ ಎಸ್.ಎಸ್.ಎಲ್.ಸಿ.ಯ ಕನ್ನಡ ಪ್ರಥಮ ಭಾಷೆಯ ಮಟ್ಟದ 150 ಅಂಕಗಳಿಗೆ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳೊಂದಿಗೆ ಕಡ್ಡಾಯವಾಗಿ ತೇರ್ಗಡೆ ಹೊಂದಲೇಬೇಕು. ನಿಗದಿಪಡಿಸಿದ ಕನಿಷ್ಠ 50 ಅಂಕಗಳನ್ನು ಪಡೆಯದ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಾಗುವುದಿಲ್ಲ ಹಾಗೂ ಈ ಕನ್ನಡ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಯ್ಕೆಗೆ ಪರಿಗಣಿಸುವುದಿಲ್ಲ.

ಆದರೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯ ವಿನಾಯಿತಿ ಬಗ್ಗೆ ಕೆಳಕಂಡ ಷರತ್ತುಗಳನ್ನು ಸೇರ್ಪಡಿಸಲಾಗಿರುತ್ತದೆ.

" ಎಸ್.ಎಸ್.ಎಲ್.ಸಿ. ಅಥವಾ ಇದಕ್ಕೆ ತತ್ಸಮಾನವೆಂದು ರಾಜ್ಯ ಸರ್ಕಾರದಿಂದ ಘೋಷಿಸಲ್ಪಟ್ಟ ಇತರೆ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್.ಎಲ್.ಸಿ. ಪರೀಕ್ಷೆಗಿಂತ ಮೇಲ್ಮಟ್ಟದ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು ಮುಖ್ಯ ಭಾಷೆಯಾಗಿ, ಅಥವಾ ದ್ವಿತೀಯ ಭಾಷೆಯಾಗಿ ಅಥವಾ ಐಚ್ಛಿಕ ವಿಷಯವಾಗಿ (ಆದರೆ ಸಂಯುಕ್ತ ಪತ್ರಿಕೆಯ ವಿಷಯಗಳಲ್ಲೊಂದಾಗಿರಬಾರದು) ಅಥವಾ ಮೇಲಿನ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿರುವ ಅಥವಾ ಕರ್ನಾಟಕ ಲೋಕಸೇವಾ ಆಯೋಗದಿಂದ ಇದೇ ನಿಯಮಗಳಡಿಯಲ್ಲಿ ಈ ಹಿಂದೆ ನಡೆಸಲ್ಪಟ್ಟ ಕಡ್ಡಾಯ ಕನ್ನಡ ಭಾಷೆ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಅಭ್ಯರ್ಥಿಗಳು, ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದರಿಂದ ವಿನಾಯಿತಿ ಹೊಂದಿರುತ್ತಾರೆ ".

ವಿಶೇಷ ಸೂಚನೆ:– ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ತೃತೀಯ ಭಾಷೆಯನ್ನಾಗಿ ಅಭ್ಯಸಿಸಿದ್ದಲ್ಲಿ ಅಥವಾ ಇತರೆ ಕನ್ನಡ ಭಾಷಾ ಪರೀಕ್ಷೆಗಳಲ್ಲಿ/ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದಂತಹ ಅಭ್ಯರ್ಥಿಗಳಿಗೆ ಈ ಮೇಲಿನ ವಿನಾಯಿತಿ ಪಡೆಯಲು ಅವಕಾಶ ಇರುವುದಿಲ್ಲ. ಆದುದರಿಂದ, ಇವರು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಲೇ ಬೇಕಿರುತ್ತದೆ.

ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಪಡೆಯಲು ಅರ್ಜಿಯ ನಿಗದಿತ ಸ್ಥಳದಲ್ಲಿ ವಿವರಗಳನ್ನು ನೀಡತಕ್ಕದ್ದು. ಸರಿಯಾದ ಮಾಹಿತಿ ಒದಗಿಸದಿದ್ದಲ್ಲಿ ಮೇಲಿನ ವಿನಾಯಿತಿಗಳನ್ನು ಪಡೆಯಲು ಅರ್ಹತೆ ನೀಡುವುದಿಲ್ಲ. ಹಾಗೂ ವಿನಾಯಿತಿ ಪಡೆಯಲು ತಪ್ಪಾಗಿ ಮಾಹಿತಿ ನೀಡಿದ ಅಭ್ಯರ್ಥಿಗಳಿಗೆ ಸಂದರ್ಶನದ ಮುನ್ನವೇ ಅನರ್ಹಗೊಳಿಸಲಾಗುವುದು. ಮುಂದುವರಿದು, ಅರ್ಜಿಯಲ್ಲಿ ಈ ಮಾಹಿತಿಯನ್ನು ತಪ್ಪಾಗಿ ನೀಡಿದ ನಂತರ ಇದನ್ನು ಸರಿಪಡಿಸಿಕೊಳ್ಳಲು ಅವಕಾಶ ನೀಡಲಾಗುವುದಿಲ್ಲ. ಆದುದರಿಂದ, ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವಾಗ ಎಲ್ಲಾ ವಿಷಯಗಳನ್ನು ಪರಿಶೀಲಿಸಿ, ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಂಡನಂತರವೇ ಒಪ್ಪಿಗೆಯನ್ನು ನೀಡಬೇಕೆಂದು ಸೂಚಿಸಿದೆ.

5(2) ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) (6ನೇ ತಿದ್ದುಪಡಿ) ನಿಯಮಗಳು, 2013 ರಂತೆ ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳ ನೇಮಕಾತಿಯನ್ನು ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ಸಂದರ್ಶನ ಮೂಲಕ ಮಾಡಲಾಗುವುದು.

ಸ್ಪರ್ಧಾತ್ಮಕ ಪರೀಕ್ಷಾ ವಿಧಾನ: ಸ್ಪರ್ಧಾತ್ಮಕ ಪರೀಕ್ಷೆಯು ಕೆಳಕಂಡ ಎರಡು ಪತ್ರಿಕೆಗಳನ್ನೊಳಗೊಂಡಿದ್ದು ವಸ್ತು ನಿಷ್ಠ ಬಹು ಆಯ್ಕೆ (Objective Multiple Choice) ಮಾದರಿಯದಾಗಿರುತ್ತದೆ.

ಪತ್ರಿಕೆ – 1 (ಸಾಮಾನ್ಯ ಪತ್ರಿಕೆ) (General Paper) 200 ಅಂಕಗಳು – 1½ ಘಂಟೆ

(ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣನಾದ ಒಬ್ಬ ವ್ಯಕ್ತಿಯಿಂದ ನಿರೀಕ್ಷಿಸಬಹುದಾದ ಸಾಮಾನ್ಯ ಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳಾದ ಪ್ರಚಲಿತ ವಿದ್ಯಮಾನಗಳು, ಸಾಮಾನ್ಯ ವಿಜ್ಞಾನಗಳು, ಭಾರತದ ಇತಿಹಾಸ, ಭಾರತದ ಭೂಗೋಳ, ಸಮಾಜ ವಿಜ್ಞಾನ, ಪ್ರತಿ ದಿನ ಗಮನಿಸುವ ವಿಷಯಗಳು, ಪ್ರಯೋಗಿಕ ಜ್ಞಾನ ಮತ್ತು ಸಾಮಾನ್ಯ ಬೌದ್ಧಿಕ ಸಾಮರ್ಥ್ಯಗಳನ್ನು ಒಳಗೊಂಡಿರುವ ಸಾಮಾನ್ಯ ಪತ್ರಿಕೆ).

ಪತ್ರಿಕೆ – 2 (ನಿರ್ದಿಷ್ಟ ಪತ್ರಿಕೆ) (Specific Paper) – 200 ಅಂಕಗಳು – 2 ಘಂಟೆ

ಸೂಚನೆ:– ಕನ್ನಡ ಕಡ್ಡಾಯ ಭಾಷಾ ಪರೀಕ್ಷೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಪಠ್ಯಕ್ರಮಗಳನ್ನು ಆಯೋಗದ ವೆಬ್ ಸೈಟ್

" http://kpsc.kar.nic.in/SYLLABUS " ನಲ್ಲಿ ಬಿತ್ತರಿಸಲಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಇರುತ್ತವೆ. ಕನ್ನಡ ಭಾಷೆಯಲ್ಲಿರುವ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಅಸ್ಪಷ್ಟತೆ ಇದ್ದಲ್ಲಿ ಅಭ್ಯರ್ಥಿಗಳು ಆಂಗ್ಲ ಭಾಷೆಯಲ್ಲಿರುವ ಪ್ರಶ್ನೆಗಳನ್ನು ನೋಡುವುದು ಹಾಗೂ ಇದೇ ಅಂತಿಮವಾಗಿರುತ್ತದೆ.

ಟಿಪ್ಪಣಿ:– ಪ್ರಶ್ನೆ ಪತ್ರಿಕೆ ಬಗ್ಗೆ ಯಾವುದೇ ಬಗೆಯ ಆಕ್ಷೇಪಣೆ ಇದ್ದಲ್ಲಿ, ಪರೀಕ್ಷಾ ಕೇಂದ್ರವನ್ನು ಬಿಡುವ ಮೊದಲು ಪರೀಕ್ಷಾ ದಿನವೇ ಸಂಬಂಧಿತ ಮೇಲ್ವಿಚಾರಕರ ಮುಖಾಂತರ ಅಭ್ಯರ್ಥಿಯ ಹೆಸರು, ವಿಳಾಸ, ನೋಂದಣಿ ಸಂಖ್ಯೆ ಇತ್ಯಾದಿಗಳನ್ನು ನಮೂದಿಸಿರುವ ಲಿಖಿತ ಮನವಿಯನ್ನು ಆಯೋಗಕ್ಕೆ ಸಲ್ಲಿಸಿ ಸ್ವೀಕೃತಿ (Acknowledgement) ಪಡೆಯಬೇಕು. ಪರೀಕ್ಷಾ ಕೇಂದ್ರ ಬಿಟ್ಟ ನಂತರ ಕಳುಹಿಸುವ ಯಾವುದೇ ಆಕ್ಷೇಪಣೆಯನ್ನು ಮಾನ್ಯ ಮಾಡಲಾಗುವುದಿಲ್ಲ.

ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹರಾದ ನಂತರ ನಿಯಮಾನುಸಾರ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡವಾರು ಮತ್ತು ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಆಧಾರದ ಮೇಲೆ 1:3 ಅನುಪಾತದಲ್ಲಿ ಸಂದರ್ಶನಕ್ಕೆ ಆಹ್ವಾನಿಸಲಾಗುವುದು. ಅಭ್ಯರ್ಥಿಗಳು ಪರೀಕ್ಷೆಗೆ / ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು.

ಸಂದರ್ಶನಕ್ಕೆ ನಿಗದಿಪಡಿಸಿದ ಗರಿಷ್ಠ ಅಂಕಗಳು:– ಸ್ಪರ್ಧಾತ್ಮಕ ಪರೀಕ್ಷೆಗೆ ನಿಗದಿಪಡಿಸಿದ ಒಟ್ಟು ಅಂಕಗಳ ಶೇಕಡ 12.5ರಷ್ಟು **ಸಂದರ್ಶನಕ್ಕೆ ನಿಗದಿಪಡಿಸಿದ ಗರಿಷ್ಠ ಅಂಕಗಳಾಗಿರುತ್ತವೆ.** ಆಯೋಗವು ನಿಯಮಾನುಸಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳು ಮತ್ತು ಸಂದರ್ಶನದಲ್ಲಿ ಗಳಿಸಿದ ಅಂಕಗಳ ಶೇಕಡವಾರು ಜೇಷ್ಠತೆಯನ್ನು ಆಧರಿಸಿ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ನಿಯಮಗಳನುಸಾರ ಹುದ್ದೆಗಳ ನೇಮಕಾತಿಗಾಗಿ ಇರುವ ಮೀಸಲಾತಿಯನ್ವಯ ಪ್ರಕಟಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತದೆ.

5(3) ಸಂದರ್ಶನ ನಡೆಸುವ ಉದ್ದೇಶ ಎಂದರೆ ಅಭ್ಯರ್ಥಿಗಳು ಆಯ್ಕೆ ಬಯಸಿದ ಹುದ್ದೆಗೆ ಅವರ ಅರ್ಹತೆ, ವ್ಯಕ್ತಿತ್ವ, ಸಂಬಂಧಿತ ವಿಷಯದಲ್ಲಿ ವ್ಯಕ್ತಪಡಿಸುವ ಸಾಮರ್ಥ್ಯತೆ, ಸೂಕ್ಷ್ಮತೆ ಮತ್ತು ಕರ್ತೃತ್ವ ಶಕ್ತಿ, ಸಾಮಾನ್ಯ ಜ್ಞಾನ ಹಾಗೂ ವಿಷಯದಲ್ಲಿನ ಪರಿಜ್ಞಾನ ಹಾಗೂ ಇನ್ನಿತರ ವಿಶೇಷ ಗುಣಗಳನ್ನು ನಿರ್ಧರಿಸುವುದಾಗಿದ್ದು, ಅಭ್ಯರ್ಥಿಗಳು ಆಯಾ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಮತ್ತು ಆಯೋಗವು ನಡೆಸುವ ಸಂದರ್ಶನದಲ್ಲಿ ಗಳಿಸಿದ ಅಂಕಗಳ ಜೇಷ್ಠತೆಯ ಆಧಾರದ ಮೇಲೆ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಆಯ್ಕೆ ಮಾಡಲಾಗುವುದು.

5(4) ಭಾಗ–2 ರಲ್ಲಿ ಅಧಿಸೂಚಿಸಿದ ವಿಶೇಷ ನೇಮಕಾತಿ ನಿಯಮಗಳು 2001ರನ್ವಯ ಭರ್ತಿ ಮಾಡಲಾಗುವ ಬ್ಯಾಕ್‌ಲಾಗ್ ಹುದ್ದೆಗಳು)

ನೇಮಕಾತಿ ವಿಧಾನ:– ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯನ್ನಾಗಲೀ ಅಥವಾ ಸಂದರ್ಶನವನ್ನಾಗಲೀ (Personality Test) ಎದುರಿಸಬೇಕಾಗಿರುವುದಿಲ್ಲ. ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು(ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ತುಂಬದೇ ಇರುವ ಸ್ಥಾನಗಳು) (ವಿಶೇಷ ನೇಮಕಾತಿ) ನಿಯಮಗಳು 2001ರನ್ವಯ, ಆಯಾ ಹುದ್ದೆಗಳಿಗೆ ನಿಗದಿಪಡಿಸಿದ್ದ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಗಳು ಗಳಿಸಿದ್ದ ಒಟ್ಟು ಅಂಕಗಳ ಶೇಕಡಾವಾರನ್ನು ಆಧರಿಸಿ 18 ವರ್ಷದಿಂದ 28 ವರ್ಷ ವಯೋಮಿತಿಯುಳ್ಳ (29 ವರ್ಷದೊಳಗಿನವರು)ಅಭ್ಯರ್ಥಿಗಳ ಒಂದು ಜ್ಯೇಷ್ಠತಾ ಪಟ್ಟಿಯನ್ನು ಹಾಗೂ 29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳ ಇನ್ನೊಂದು ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಇದರ ಆಧಾರದಂತೆ ಆಯ್ಕೆ ಮಾಡಲಾಗುವುದು. ಆಯ್ಕೆ ಮಾಡುವಾಗ 29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳ ಜ್ಯೇಷ್ಠತಾ ಪಟ್ಟಿಯಲ್ಲಿರುವವರಿಗೆ ಮೊದಲ ಆದ್ಯತೆ ನೀಡಲಾಗುವುದು.

6. ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವಯೋಮಿತಿ:–

6(ಎ) ಶೈಕ್ಷಣಿಕ ವಿದ್ಯಾರ್ಹತೆ:– ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅನುಸೂಚಿಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿರುವ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದದೆ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿದ್ದರೂ ಸಹ ಪರಿಗಣಿಸಲಾಗುವುದಿಲ್ಲ.

6(ಬಿ) ಯಾವುದೇ ಹುದ್ದೆಗೆ ಸೇವಾನುಭವವನ್ನು ನಿಗದಿಪಡಿಸಿದಾಗ ಅಭ್ಯರ್ಥಿಗಳು ವಿದ್ಯಾರ್ಹತೆ ಹೊಂದಿದ ನಂತರ ಸೇವಾನುಭವ ಹೊಂದಿರತಕ್ಕದ್ದು ಹಾಗೂ ಈ ಸೇವಾನುಭವವನ್ನು ಕೊನೆಯ ದಿನಾಂಕದೊಳಗೆ ಹೊಂದಿರಬೇಕು.

6(ಸಿ) ಯಾವುದೇ ಹುದ್ದೆಗೆ ಆದ್ಯತಾ ವಿದ್ಯಾರ್ಹತೆಯನ್ನು ನಿಗದಿಪಡಿಸಿದಾಗ ಆದ್ಯತಾ ವಿದ್ಯಾರ್ಹತೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಪರಿಗಣಿಸಲಾಗುವುದು. ಆದರೆ ಆಯ್ಕೆಪಟ್ಟಿಯನ್ನು ಸಿದ್ಧಪಡಿಸುವಾಗ ಆದ್ಯತಾ ವಿದ್ಯಾರ್ಹತೆ ಹೊಂದಿರುವ ಮತ್ತು ಆದ್ಯತಾ ವಿದ್ಯಾರ್ಹತೆ ಹೊಂದದೇ ಇರುವ ಅಭ್ಯರ್ಥಿಗಳ ಅಂಕಗಳ ಜೇಷ್ಠತೆಯ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಆಧಾರದ ಮೇಲೆ ಮಾಡಲಾಗುವುದು.

6.1 ಭಾಗ–2 ರಲ್ಲಿ ಅಧಿಸೂಚಿಸಿದ ಬ್ಯಾಕ್‌ಲಾಗ್ ಹುದ್ದೆಗಳ ಶೈಕ್ಷಣಿಕ ವಿದ್ಯಾರ್ಹತೆ:– ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅನುಸೂಚಿಯಲ್ಲಿ ಆಯಾ ಹುದ್ದೆಯ ಮುಂದೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದದೇ, ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿದ್ದರೂ ಸಹ ಪರಿಗಣಿಸಲಾಗುವುದಿಲ್ಲ. **ಸದರಿ ಹುದ್ದೆಗಳ ನೇಮಕಾತಿಯನ್ನು**

ನಿಯಮಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳ ಜ್ಯೇಷ್ಠತೆಯನುಸಾರ ಮಾಡಲಾಗುವುದರಿಂದ ಅಭ್ಯರ್ಥಿಗಳು ಅಂಕಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ತಪ್ಪಿದ್ದಲ್ಲಿ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

6.2 ವಯೋಮಿತಿ:– ಅನುಸೂಚಿಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿದಂತೆ, ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕನಿಷ್ಠ ವಯೋಮಿತಿಯನ್ನು ಹೊಂದಿರಬೇಕು ಹಾಗೂ ನಿಗದಿತ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

ಈ ಕೆಳಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು. **(ಭಾಗ –1 ರಲ್ಲಿ ಅಧಿಸೂಚಿಸಿದ ಹುದ್ದೆಗಳಿಗೆ ಮಾತ್ರ. ಭಾಗ–2 ರಲ್ಲಿ ಅಧಿಸೂಚಿಸಿದ ಬ್ಯಾಕ್‌ಲಾಗ್ ಹುದ್ದೆಗಳಿಗೆ ವಯೋಮಿತಿ ಸಡಿಲಿಕೆ ನೀಡಲಾಗುವುದಿಲ್ಲ.)**

(ಅ) ಅಭ್ಯರ್ಥಿಯು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಯಾದ ಅಥವಾ ರಾಜ್ಯ ಅಧಿನಿಯಮದ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಗೊಂಡು ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ಅಥವಾ ಹಿಂದೆ ಹೊಂದಿದ್ದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ಅವಳು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

(ಆ) ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಕೇಂದ್ರ ಸಶಸ್ತ್ರ ದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು.

ವಿವರಣೆ:– (1) ಮಾಜಿ ಸೈನಿಕ ಎಂದರೆ ಕೇಂದ್ರ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯು ದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ ಆದರೆ ಡಿಫೆನ್ಸ್ ಸೆಕ್ಯೂರಿಟಿ ಕೋರ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ. ಮತ್ತು (2) ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

ಅ) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

ಅಥವಾ

ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಅಂತಹ ಸೇವೆಯಿಂದ ಬಿಡುಗಡೆಯಾದವನು.

ಅಥವಾ

ಇ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಅಥವಾ

ಈ) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದುಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರ್ಯಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು:–

i) ನಿರಂತರ ಸೇವೆ ಸಲ್ಲಿಸಿದ ನಿವೃತ್ತಿ ಹೊಂದಿದ ಪಿಂಚಣಿದಾರರು.

ii) ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.

iii) ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

ವಿವರಣೆ:– ಕೇಂದ್ರ ಸಶಸ್ತ್ರ ದಳದಲ್ಲಿ ಸೇವೆಯಲ್ಲಿರುವ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ನಿರ್ದಿಷ್ಟ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಪುನರ್ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗೆ ನೇಮಕ ಹೊಂದುವಂತಿಲ್ಲ. ಇಂತಹವರು ಅರ್ಜಿ ಸಲ್ಲಿಸುವ ಮುನ್ನ ಸೇನೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಬೇಕು.

(ಇ) ಅಭ್ಯರ್ಥಿಗಳು ನ್ಯಾಷನಲ್ ಕ್ಯಾಡೆಟ್ ಕೋರ್‌ನಲ್ಲಿ ಪೂರ್ಣಕಾಲಿಕ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂಥ ಕ್ಯಾಡೆಟ್ ಪರಿವೀಕ್ಷನಾಗಿ ಅವನು ಸೇವೆ ಸಲ್ಲಿಸಿದಷ್ಟು ವರ್ಷಗಳು.

(ಈ) ಅಭ್ಯರ್ಥಿಯು ರಾಜ್ಯ ಸರ್ಕಾರದಿಂದ ಪುರಸ್ಕೃತವಾದ ಗ್ರಾಮೀಣ ಔದ್ಯಮೀಕರಣ ಯೋಜನೆಯ ಮೇರೆಗೆ ನೇಮಕಗೊಂಡ ಗ್ರಾಮ ಸಮೂಹ ಪರಿಶೀಲಕನಾಗಿ ಈಗ ಕೆಲಸ ಮಾಡುತ್ತಿದ್ದರೆ ಅಥವಾ ಹಿಂದೆ ಇದ್ದ ಪಕ್ಷದಲ್ಲಿ ಅವನು / ಅವಳು ಅಂತಹ ಗ್ರಾಮ ಪರಿಶೀಲಕನಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು.

(ಉ) ಅಭ್ಯರ್ಥಿಯು ಅಂಗವಿಕಲನಾಗಿದ್ದರೆ 10 ವರ್ಷಗಳು

(ಊ) ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿರುವ ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಈಗ ಹುದ್ದೆಯನ್ನು ಹೊಂದಿದ್ದರೆ ಅಥವಾ ಹಿಂದೆ ಹೊಂದಿದ್ದ ಪಕ್ಷದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ಅವಳು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 5 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

(ಋ) ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ 10 ವರ್ಷಗಳು.

(ೠ) ಅಭ್ಯರ್ಥಿಯು ಜೀತ ಕಾರ್ಮಿಕನಾಗಿದ್ದ ಪಕ್ಷದಲ್ಲಿ 10 ವರ್ಷಗಳು.

ಉಪ ಕಂಡಿಕೆ 6.2.(ಖ) ರ ಮೇರೆಗೆ ವಯೋಮಿತಿ ಸಡಿಲಿಕೆಯನ್ನು ಕೋರುವ ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರದಿಂದ ತಾನು ವಿಧವೆಯೆಂದು ಹಾಗೂ ಮರು ಮದುವೆಯಾಗಿರುವುದಿಲ್ಲವೆಂಬ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡು ಆಯೋಗವು ಸೂಚಿಸಿದಾಗ ಇದರ ಮೂಲ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸಬೇಕು ಹಾಗೂ ಉಪ ಕಂಡಿಕೆ 6(ಋ) ಮೇರೆಗೆ ವಯೋಮಿತಿಯ ಸಡಿಲಿಕೆಯನ್ನು ಕೋರುವ ಅಭ್ಯರ್ಥಿಯು ಜೀತ ಕಾರ್ಮಿಕನಾಗಿದ್ದು, ಸದರಿ ಅಧಿನಿಯಮ ಅಥವಾ 1957ರ ಕರ್ನಾಟಕ ಜೀತ ಕಾರ್ಮಿಕ ಪದ್ಧತಿ (ರದ್ದಿಯಾತಿ) ಆದೇಶದ ಮೇರೆಗೆ ಜೀತ ಸಾಲವನ್ನು ಸಂದಾಯ ಮಾಡುವ ಹೊಣೆಯಿಂದ ಬಿಡುಗಡೆಯಾಗಿದ್ದಾನೆಂದು ಪ್ರಮಾಣ ಪತ್ರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ರಿಂದ ಪಡೆದಿಟ್ಟುಕೊಂಡು ಆಯೋಗವು ಸೂಚಿಸಿದಾಗ ಇದರ ಮೂಲ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸಬೇಕು.

6.3 ಅಲ್ಪಸಂಖ್ಯಾತರ ಇಲಾಖೆಯಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಪ್ರಾಂಶುಪಾಲರ ಮತ್ತು ಶಿಕ್ಷಕರ ಹುದ್ದೆಗಳಿಗೆ ಈಗಾಗಲೇ ಗುತ್ತಿಗೆ ಆಧಾರದ ಮೇಲೆ ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ ಅವರು ಸೇವೆ ಸಲ್ಲಿಸಿದ ಪ್ರತಿ ಶೈಕ್ಷಣಿಕ ವರ್ಷಕ್ಕೆ 01 ವರ್ಷದಂತೆ, ಗರಿಷ್ಠ 05 ವರ್ಷದ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದು. ಈ ಸಡಿಲಿಕೆಯನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಈ ಅಧಿಸೂಚನೆಗೆ ಅನುಬಂಧಿಸಿರುವ ನಮೂನೆಯಲ್ಲಿಯೇ ಸೇವಾ ಪ್ರಮಾಣ ಪತ್ರವನ್ನು ಸಂಬಂಧಿತ ಪ್ರಾಧಿಕಾರದಿಂದ ಪಡೆದು ಅಪ್ ಲೋಡ್ ಮಾಡತಕ್ಕದ್ದು ಹಾಗೂ ಸೇವಾ ವಿವರಗಳನ್ನು ಅರ್ಜಿಯಲ್ಲಿ ನಮೂದಿಸತಕ್ಕದ್ದು. ತಪ್ಪಿದ್ದಲ್ಲಿ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ. ಇತರೆ ನಮೂನೆಗಳಲ್ಲಿ ಪಡೆದ ಸೇವಾ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

6.4. ಆಯೋಗದ ದಿನಾಂಕ 01–06–2013 ರ ಅಧಿಸೂಚನೆಗೆ ಅನುಗುಣವಾಗಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರ ಹುದ್ದೆಗೆ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಿದ ಈಗಿನ ಕೊನೆಯ ದಿನಾಂಕಕ್ಕೆ ಗರಿಷ್ಠ ವಯೋಮಿತಿ ಮೀರುವಂತಹ ಅಭ್ಯರ್ಥಿಗಳಿಗೆ ಹಿಂದಿನ ಅಧಿಸೂಚನೆಯ ಕೊನೆಯ ದಿನಾಂಕದಂದಿನ ವಯೋಮಿತಿಯನ್ನು ಪರಿಗಣಿಸಲಾಗುವುದು.

7. ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು :–

ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಮೂನೆಗಳಲ್ಲಿಯೇ ಮೀಸಲಾತಿ ಪ್ರಮಾಣ ಪತ್ರಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು:–

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು:– ನಮೂನೆ ' ಡಿ '

ಆ) ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳು:– ನಮೂನೆ ' ಇ '

ಇ) ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು:– ನಮೂನೆ 'ಎಫ್ '

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಅಂದರೆ ತಹಶೀಲ್ದಾರ್‌ರವರ ಸಹಿ ಮತ್ತು ಮೊಹರು ಅಥವಾ ಬಾರ್ ಕೋಡ್, ಹಾಲೋಗ್ರಾಮ್ ಮತ್ತು ವಾಟರ್ ಮಾರ್ಕ್‌ನೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ರ ಮೀಸಲಾತಿ ಪ್ರಮಾಣ ಪತ್ರಗಳು ರದ್ದಾಗುವವರೆಗೂ ಚಾಲ್ತಿಯಲ್ಲಿರುವುದರಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ನಿಗದಿಪಡಿಸಿದ ನಮೂನೆಯಲ್ಲಿ ಪಡೆದಿಟ್ಟುಕೊಂಡಿರತಕ್ಕದ್ದು. ಹಿಂದುಳಿದ ವರ್ಗಗಳ ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿ ವರ್ಗದ ಮೀಸಲಾತಿ ಪ್ರಮಾಣ ಪತ್ರಗಳು 5 ವರ್ಷ ಚಾಲ್ತಿಯಲ್ಲಿರುತ್ತವೆ. ಅಭ್ಯರ್ಥಿಗಳು ಪಡೆದಿರುವ ಪ್ರಮಾಣ ಪತ್ರವು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು. ಅರ್ಜಿಯ ನಿಗದಿತ ಸ್ಥಳದಲ್ಲಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ನಮೂದಿಸತಕ್ಕದ್ದು ಹಾಗೂ ಸಂದರ್ಶನಕ್ಕೆ /ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಇದೇ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಅಥವಾ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಸಾಮಾನ್ಯ ಅರ್ಹತೆಯಡಿಯಲ್ಲಿ ಅರ್ಹರಾದಲ್ಲಿ ಮಾತ್ರ ಪರಿಗಣಿಸಲಾಗುವುದು. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ. ಈ ನಮೂನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.

8. ಗ್ರಾಮೀಣ ಅಭ್ಯರ್ಥಿ:–

ಸರ್ಕಾರಿ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 59 ಶಾಸನ 2000 ದಿನಾಂಕ 06–01–2001 ರನ್ವಯ ಗ್ರಾಮೀಣ ಮೀಸಲಾತಿಯಡಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದಲ್ಲಿ ಮಾತ್ರ ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 08 ಸೆನೆನಿ 2001 ದಿನಾಂಕ 13–02–2001 ರನ್ವಯ ನಮೂನೆ–2ನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ/ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲುರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ–1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ತಹಶೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ–2ರಲ್ಲಿ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ/ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಸಂದರ್ಶನಕ್ಕೆ/ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅಂತಹವರು ಗ್ರಾಮೀಣ ಮೀಸಲಾತಿಗೆ ಸಹ ಅನರ್ಹರಾಗುತ್ತಾರೆ) (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ).

9. ಕನ್ನಡ ಮಾಧ್ಯಮ ಅಭ್ಯರ್ಥಿ

ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ 71 ಸೆನೆನಿ 2001 ದಿನಾಂಕ 24–10–2002 ರನ್ವಯ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಸಂದರ್ಶನಕ್ಕೆ / ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಈ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ).

10. ಅಂಗವಿಕಲ ಅಭ್ಯರ್ಥಿ

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 50 ಎಸ್ಆರ್ಆರ್ 2000 ದಿನಾಂಕ 03–09–2005 ರಲ್ಲಿ ರಾಜ್ಯ ಸಿವಿಲ್ ಸೇವೆಗಳ ಸಮೂಹ –' ಎ ' ಮತ್ತು ' ಬಿ ' ಗುಂಪಿನ ಹುದ್ದೆಗಳಿಗೆ ಶೇಕಡ 3 ರಷ್ಟು ಮತ್ತು ಸಮೂಹ 'ಸಿ' ಗುಂಪಿನ ಹುದ್ದೆಗಳಿಗೆ ಶೇಕಡ 5 ರಷ್ಟು ಹುದ್ದೆಗಳನ್ನು ಅಂಗವಿಕಲರಿಗೆ ಮೀಸಲಾತಿ ಕಲ್ಪಿಸಿದ್ದು, ಇದರನ್ವಯ ಶೇಕಡ 40 ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115 ಸೆನೆನಿ 2005 ದಿನಾಂಕ 19–11–2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಮಮಇ 65 ಪಿಹೆಚ್‌ಪಿ 2010 ದಿನಾಂಕ 18–02–2011ರಂತೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯ ವೈದ್ಯಕೀಯ ಪ್ರಾಧಿಕಾರ/ತಾಲ್ಲೂಕು ಮಟ್ಟದ ವೈದ್ಯಕೀಯ ಪ್ರಾಧಿಕಾರ/ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರ/ ಬೆಂಗಳೂರು ವೈದ್ಯಕೀಯ ಪ್ರಾಧಿಕಾರ ಇವರಿಂದ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು. ಸಂದರ್ಶನಕ್ಕೆ/ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು / ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ. ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು. (ಈ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ).

11. ಯೋಜನೆಗಳಿಂದ ನಿರಾಶ್ರಿತ ಅಭ್ಯರ್ಥಿ(PDP)

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 23 ಸೆನೆನಿ 99 ದಿನಾಂಕ 23–11–2000 ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಆದರೆ ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬ ಅಭ್ಯರ್ಥಿಗಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ (ಗ್ರೂಪ್ 'ಸಿ' ಹುದ್ದೆಗಳಿಗೆ ಮಾತ್ರ) ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರ್‌ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು. ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು. ಸಂದರ್ಶನಕ್ಕೆ ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಈ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ).

12. ಅನುಚ್ಛೇಧ 371 (ಜೆ) ರಂತೆ ಹೈದ್ರಾಬಾದ್ – ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ.

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ – ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013 ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅನುಬಂಧ–ಎ ಯಲ್ಲಿರುವ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಉಪವಿಭಾಗದ ಸಹಾಯಕ ಆಯುಕ್ತರಿಂದ ಪಡೆದಿಟ್ಟುಕೊಳ್ಳತಕ್ಕದ್ದು. ಅಭ್ಯರ್ಥಿಗಳು ಪಡೆದಿರುವ ಪ್ರಮಾಣ ಪತ್ರವು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು. ಅರ್ಜಿಯ ನಿಗದಿತ ಸ್ಥಳದಲ್ಲಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ನಮೂದಿಸತಕ್ಕದ್ದು. ಸಂದರ್ಶನ ಸಮಯದಲ್ಲಿ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಸದರಿ ಮೀಸಲಾತಿಯಡಿ ಪರಿಗಣಿಸಲಾಗುವುದಿಲ್ಲ. ಈ ಪ್ರಮಾಣ ಪತ್ರದ ನಮೂನೆಯನ್ನು ಈ ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ. ಈ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು. ಹೈದ್ರಾಬಾದ್ – ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳು ರಾಜ್ಯ ವೃಂದಕ್ಕೆ ಸೇರಿದ ಹುದ್ದೆಗಳಿಗೂ ಅರ್ಜಿ ಸಲ್ಲಿಸಬಹುದು.

13. ಅಲ್ಪ ಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿನ ಪ್ರಾಂಶುಪಾಲರ /ಶಿಕ್ಷಕರ ಹುದ್ದೆಗಳಿಗೆ ಕೃಪಾಂಕ/ವಯೋಮಿತಿ ಸಡಿಲಿಕೆ ಕೋರಲು ದೃಢೀಕರಣ ಪ್ರಮಾಣ ಪತ್ರ:–

ಹೊರ ಸಂಪನ್ಮೂಲದಿಂದ ನೇಮಕಗೊಂಡ ದಿನಾಂಕ: 01.04.2014 ರಲ್ಲಿದ್ದಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸಿದ ಹೊರ ಸಂಪನ್ಮೂಲ ಪ್ರಾಂಶುಪಾಲರು ಮತ್ತು ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು ಭಾಷಾ ಶಿಕ್ಷಕರು, ವಿಜ್ಞಾನ, ಸಮಾಜ–ವಿಜ್ಞಾನ, ಗಣಿತ, ದೈಹಿಕ ಶಿಕ್ಷಕರು, ಕಂಪ್ಯೂಟರ್ ಶಿಕ್ಷಕರು, ಆರ್ಟ್ಸ್ ಅಂಡ್ ಕ್ರಾಫ್ಟ್ ವಿಷಯಗಳ ಶಿಕ್ಷಕರು ಸೇವೆ ಸಲ್ಲಿಸಿರುವ ಬಗ್ಗೆ ದೃಢೀಕರಣ ಪ್ರಮಾಣ ಪತ್ರವನ್ನು ನಿಗದಿಪಡಿಸಿರುವ ನಮೂನೆಯಲ್ಲಿ ಪಡೆದಿಟ್ಟುಕೊಂಡಿರತಕ್ಕದ್ದು. ಹೊರ ಸಂಪನ್ಮೂಲದಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿರುವ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳ ಸಹಿ ಮತ್ತು ಮೊಹರಿನೊಂದಿಗೆ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದು ಹಾಗೂ ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು ಭಾಷಾ ಶಿಕ್ಷಕರು, ವಿಜ್ಞಾನ, ಸಮಾಜ–ವಿಜ್ಞಾನ, ಗಣಿತ, ದೈಹಿಕ ಶಿಕ್ಷಕರು, ಕಂಪ್ಯೂಟರ್ ಶಿಕ್ಷಕರು, ಆರ್ಟ್ಸ್ ಅಂಡ್ ಕ್ರಾಫ್ಟ್ ವಿಷಯ ಶಿಕ್ಷಕರುಗಳು ಅವರು ಸೇವೆ ಸಲ್ಲಿಸಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಪ್ರಾಂಶುಪಾಲರ ಸಹಿ ಹಾಗೂ ಮೊಹರಿನೊಂದಿಗೆ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದು ಅಭ್ಯರ್ಥಿಗಳು ಅರ್ಜಿಯ ನಿಗದಿತ ಸ್ಥಳದಲ್ಲಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕ ಹಾಗೂ ಸೇವಾ ವಿವರಗಳನ್ನು ತಪ್ಪದೇ ನಮೂದಿಸತಕ್ಕದ್ದು. ಸಂದರ್ಶನಕ್ಕೆ ಅರ್ಹರಾದಾಗ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳಿಗೆ ಕೃಪಾಂಕ/ವಯೋಮಿತಿ ಸಡಿಲಿಕೆ ನೀಡಲಾಗುವುದಿಲ್ಲ. (ಅಭ್ಯರ್ಥಿಗಳು ಕಡ್ಡಾಯವಾಗಿ ಈ ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿರುವ ಪ್ರಮಾಣ ಪತ್ರದ ನಮೂನೆಯಲ್ಲಿ ಸೇವಾ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಇತರೆ ಯಾವುದೇ ನಮೂನೆಯನ್ನು ಪರಿಗಣಿಸಲಾಗುವುದಿಲ್ಲ).

14(ಎ) ಕಡ್ಡಾಯ ಕನ್ನಡ ಭಾಷಾ / ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬೆಂಗಳೂರು / ಮೈಸೂರು/ ಧಾರವಾಡ / ಗುಲ್ಬರ್ಗಾ ವಿಭಾಗೀಯ / ಶಿವಮೊಗ್ಗ ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಆಯೋಗವು ನಿಗದಿಪಡಿಸಿರುವ ಇತರೆ ಯಾವುದೇ ಕೇಂದ್ರ ಸ್ಥಳದಲ್ಲಿ ನಡೆಸಲಾಗುವುದು. ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ಅವರು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸುವ ಪರೀಕ್ಷಾ ಕೇಂದ್ರವನ್ನು ನಮೂದಿಸತಕ್ಕದ್ದು. ಪರೀಕ್ಷಾ ಕೇಂದ್ರವನ್ನು ನಿಗದಿಪಡಿಸುವುದು ಆಯೋಗದ ಅಂತಿಮ ತೀರ್ಮಾನವಾಗಿರುತ್ತದೆ.

- ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ/ಸ್ಪರ್ಧಾತ್ಮಕ ಪರೀಕ್ಷೆಗಳನ್ನು 06–12–2014 ರಿಂದ 08–12–2014 ರವರೆಗೆ ನಡೆಸಲಾಗುವುದು. ಪರೀಕ್ಷೆಗಳ ವೇಳಾಪಟ್ಟಿಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ.
- ಭಾಗ–2 ರಲ್ಲಿ ಅಧಿಸೂಚಿಸಿದ ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆಯನ್ನು ದಿನಾಂಕ 14–11–2014 ರಿಂದ ಮಾಡಲಾಗುವುದು.
- ಪರೀಕ್ಷಾ/ಸಂದರ್ಶನದ /ಮೂಲ ದಾಖಲಾತಿಗಳ ಪರಿಶೀಲನೆಯ (ಭಾಗ–2 ರಲ್ಲಿ ಅಧಿಸೂಚಿಸಿದ ಹುದ್ದೆಗಳಿಗೆ)

ವೇಳಾ ಪಟ್ಟಿಯನ್ನು ಆಯೋಗದ ವೆಬ್ ಸೈಟ್ "http://kpsc.kar.nic in/ notification" ನಲ್ಲಿಯೂ ಬಿತ್ತರಿಸಲಾಗುವುದು.

ಈ ಪರೀಕ್ಷೆಗಳ ಪ್ರವೇಶ ಪತ್ರಗಳನ್ನು ಅಭ್ಯರ್ಥಿಗಳಿಗೆ ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ಪತ್ರಿಕೆಗಳಲ್ಲಿ ಪ್ರಕಟಣೆಯ ಮೂಲಕ ತಿಳಿಸಲಾಗುವುದು ಹಾಗೂ ಈ ಬಗ್ಗೆ ಮಾಹಿತಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿಯೂ ಬಿತ್ತರಿಸಲಾಗುವುದು. ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶ ಪತ್ರಗಳನ್ನು ಡೌನ್ ಲೋಡ್ ಮಾಡಿಕೊಂಡು ಪರೀಕ್ಷಾ ಕೇಂದ್ರಗಳಿಗೆ ಹೋಗಬೇಕು. ಪ್ರವೇಶ ಪತ್ರ ಇಲ್ಲದಂತಹ ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರವನ್ನು ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.

(ಬಿ) ಆಯಾ ಹುದ್ದೆಗಳಿಗೆ ಸಂದರ್ಶನ ದಿನಾಂಕ ನಿಗದಿಪಡಿಸಿದಾಗ ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ಪತ್ರಗಳನ್ನು Speed Post ಮುಖಾಂತರ ಕಳುಹಿಸಿ ಅರ್ಹತಾ ಪಟ್ಟಿಯನ್ನು ಆಯೋಗದ ಜಾಲ ತಾಣ (Web Site) ದಲ್ಲಿ ಬಿತ್ತರಿಸಲಾಗುವುದು. ಈ ಬಗ್ಗೆ ಮಾಹಿತಿಯನ್ನು ಪತ್ರಿಕೆಗಳಲ್ಲಿ ಪತ್ರಿಕಾ ಟಿಪ್ಪಣಿಯ ಮೂಲಕ ತಿಳಿಸಲಾಗುವುದು. ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ಪತ್ರ ಸ್ವೀಕೃತವಾಗದಿದ್ದಲ್ಲಿ ಆಯೋಗವನ್ನು ಸಂಪರ್ಕಿಸಬಹುದು.

(ಸಿ) ವಿಶೇಷ ನೇಮಕಾತಿ ನಿಯಮಗಳು 2001ರನ್ವಯ ಮಾಡಲಾಗುವ ಭಾಗ–2 ರಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ 1:3 ಅನುಪಾತದಲ್ಲಿ ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳಿಗೆ ಸೂಚನಾ ಪತ್ರಗಳನ್ನು ಸ್ಪೀಡ್ ಪೋಸ್ಟ್ (Speed Post) ಮುಖಾಂತರ ರವಾನಿಸಿ ಅರ್ಹತಾ ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಬಿತ್ತರಿಸಲಾಗುವುದು. ಈ ಬಗ್ಗೆ ಮಾಹಿತಿಯನ್ನು ಪತ್ರಿಕೆಗಳಲ್ಲಿ ಪತ್ರಿಕಾ ಟಿಪ್ಪಣಿಯ ಮೂಲಕ ತಿಳಿಸಲಾಗುವುದು.

15. ಆಯೋಗದೊಡನೆ ಪತ್ರ ವ್ಯವಹಾರ:

ಆಯೋಗವು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಆದುದರಿಂದ, ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವಾಗ ಜಾಗರೂಕತೆಯಿಂದ ಭರ್ತಿ ಮಾಡತಕ್ಕದ್ದು.

ಸಂದರ್ಶನಕ್ಕೆ ಅನುಮತಿಸಲಾದ/ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳಿಗೆ ಸೂಚನಾ ಪತ್ರಗಳು ತಲುಪದಿದ್ದಲ್ಲಿ ಸಂದರ್ಶನ/ಮೂಲ ದಾಖಲಾತಿಯ ಪರಿಶೀಲನೆಗೆ ಸೂಚನಾ ಪತ್ರದ ನಕಲನ್ನು ನೀಡಲಾಗುವುದು. ವಿಳಾಸ ಬದಲಾವಣೆ ಇದ್ದಲ್ಲಿ ಮಾತ್ರ ಅಭ್ಯರ್ಥಿಗಳು ಲಿಖಿತ ಮೂಲಕ ಆಯೋಗದ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ಆಯೋಗವು ಪ್ರಯತ್ನಿಸುವುದು. ಆದಾಗ್ಯೂ ಈ ವಿಚಾರದಲ್ಲಿ ಆಯೋಗವು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರ ವಹಿಸತಕ್ಕದ್ದು. ಅಭ್ಯರ್ಥಿಗಳು ಆಯೋಗದೊಡನೆ ಸಂಪರ್ಕಿಸಲೇಬೇಕಾದ ಸಂದರ್ಭದಲ್ಲಿ ತಮ್ಮ ಮನವಿಯಲ್ಲಿ ಕೆಳಕಂಡ ಮಾಹಿತಿಗಳು ಒಳಗೊಂಡಿರಬೇಕು:–

(i) ಹುದ್ದೆಯ / ವಿಷಯದ ಹೆಸರು

(ii) ಅಭ್ಯರ್ಥಿಯ ಪೂರ್ಣ ಹೆಸರು (ಬಿಡಿ ಅಕ್ಷರಗಳಲ್ಲಿ)

(iii) ಅರ್ಜಿಯಲ್ಲಿ ನಮೂದಿಸಿರುವ ಅಂಚೆ ವಿಳಾಸ

16. ಪ್ರಾಮುಖ್ಯವಾದ ಸೂಚನೆಗಳು:–

ಅಭ್ಯರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಒಂದು ಹಾಳೆಯ ಮೇಲಿಟ್ಟು ಅದರ ಕೆಳಗೆ ಕಪ್ಪು ಶಾಹಿಯ ಸ್ಕೆಚ್/ಮಾರ್ಕರ್ ಪೆನ್‌ಲ್ಲಿ ಸಹಿಯನ್ನು ಸ್ಕ್ಯಾನ್ ಮಾಡಿ ಅರ್ಜಿಗೆ UPLOAD ಮಾಡಬೇಕು. ಭಾವಚಿತ್ರ ಹಾಗೂ ಸಹಿಯನ್ನು UPLOAD ಮಾಡದ ಅರ್ಜಿಗಳು ತಿರಸ್ಕೃತಗೊಳ್ಳುತ್ತದೆ. ಈ ಕೆಳಕಂಡ ಪ್ರಮಾಣ ಪತ್ರಗಳನ್ನು ನಿಗದಿತ ನಮೂನೆಯಲ್ಲಿ ON LINE ಮೂಲಕ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಸಂದರ್ಶನಕ್ಕೆ / ಮೂಲ ದಾಖಲಾತಿಯ ಪರಿಶೀಲನೆಗೆ ಅರ್ಹರಾದಾಗ ಆ ಸಮಯದಲ್ಲಿ ಅದೇ ಮೀಸಲಾತಿ ಪ್ರಮಾಣ ಪತ್ರದ / ಇತರೇ ಪ್ರಮಾಣ ಪತ್ರಗಳ ಮೂಲ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸಬೇಕು. ಇತರೆ ನಮೂನೆಗಳಲ್ಲಿ ಅಥವಾ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ತಪ್ಪಿದ್ದಲ್ಲಿ ಇವರ ಮೀಸಲಾತಿಯನ್ನು ತಿರಸ್ಕರಿಸಲಾಗುವುದು / ಅಭ್ಯರ್ಥಿತ್ವವನ್ನು ಅನರ್ಹಗೊಳಿಸಲಾಗುವುದು.

1) ಹುದ್ದೆಗೆ ನಿಗದಿಪಡಿಸಿದ ಶುಲ್ಕವನ್ನು ಅಂಚೆ ಕಛೇರಿಯಲ್ಲಿ ಪಾವತಿಸಿದ ಚಲನ್/ವಿವರದ ಪ್ರತಿ.

2) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ /ಸೆಮಿಸ್ಟರ್‌ಗಳ ಅಂಕಪಟ್ಟಿಗಳು ಹಾಗೂ ಘಟಿಕೋತ್ಸವದ ಪ್ರಮಾಣ ಪತ್ರಗಳು /ಸಿಡಿಸಿ/ ಗ್ರೇಡ್‌ನ್ನು ಶೇಕಡವಾರು ಅಂಕಗಳಿಗೆ ಪರಿವರ್ತಿಸಿದ ವಿಶ್ವವಿದ್ಯಾಲಯದಿಂದ ಪಡೆದ ಪ್ರಮಾಣ ಪತ್ರ

3) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ /ಶಾಲೆಯ ವರ್ಗಾವಣೆ ಪ್ರಮಾಣ ಪತ್ರ / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ.

4) ನಿರಾಕ್ಷೇಪಣಾ ಪತ್ರ. (ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ)

5) ಸೈನಿಕ ಸೇವೆಯಿಂದ ಬಿಡುಗಡೆಯಾದ ಪ್ರಮಾಣ ಪತ್ರ ಮತ್ತು ಪಿಂಚಣಿ / ಗ್ರಾಚ್ಯುಟಿ ಪಡೆಯುತ್ತಿರುವ ಪ್ರಮಾಣ ಪತ್ರ / ಮಾಜಿ ಸೈನಿಕ ಅವಲಂಬಿತರಾಗಿದ್ದಲ್ಲಿ, ಮಾಜಿ ಸೈನಿಕರು ಸೇವೆಯಲ್ಲಿರುವಾಗ ಮೃತಪಟ್ಟಿದ್ದಲ್ಲಿ ಅಥವಾ ಖಾಯಂ ಆಗಿ ಗಾಯಗೊಂಡಿರುವ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ)

6) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿಗಳ ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿ ಕೋರಿದ್ದಲ್ಲಿ)

7) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2ರಲ್ಲಿ (ಸಾಮಾನ್ಯ ಅರ್ಹತೆ/ಗ್ರಾಮೀಣ ಮೀಸಲಾತಿ ಕೋರಿದ ಅಭ್ಯರ್ಥಿಗಳು) (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಪ್ರವರ್ಗ–1/ ಪ್ರವರ್ಗ–2ಎ/ ಪ್ರವರ್ಗ–2ಬಿ/ ಪ್ರವರ್ಗ–3ಎ/ ಪ್ರವರ್ಗ–3ಬಿಗಳ ಮೀಸಲಾತಿಯೊಂದಿಗೆ ಗ್ರಾಮೀಣ ಮೀಸಲಾತಿ ಕೋರಿರಿದ ಅಭ್ಯರ್ಥಿಗಳು ನಮೂನೆ–2 ರಲ್ಲಿ ಮಾತ್ರ.)

8) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

9) ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

10) ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿಯ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

11) ಸೇವಾನುಭವ ಪ್ರಮಾಣ ಪತ್ರಗಳು (ನಿಗದಿಪಡಿಸಿದಲ್ಲಿ)

12) ಹೈದರಾಬಾದ್–ಕರ್ನಾಟಕ ಪ್ರದೇಶದ ಅಭ್ಯರ್ಥಿಗಳ ಮೀಸಲಾತಿಗೆ ಸಂಬಂಧಿಸಿದ ಅರ್ಹತಾ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

13) ಅಲ್ಪ ಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿನ ಪ್ರಾಂಶುಪಾಲರ ದೃಢೀಕರಣ ಪ್ರಮಾಣ / ಶಿಕ್ಷಕರ ಹುದ್ದೆಗಳಿಗೆ ಕೃಪಾಂಕ/ ವಯೋಮಿತಿ ಸಡಿಲಿಕೆ ಕೋರಿದ್ದಲ್ಲಿ ಸೇವಾ ಪ್ರಮಾಣ ಪತ್ರ (ಅನುಬಂಧಿಸಿದ ನಮೂನೆಯಲ್ಲಿ)

17. ವಿಶೇಷ ಸೂಚನೆಗಳು:–

(1) ON LINE ಮೂಲಕ ಅರ್ಜಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರ ಅದರ ಒಂದು ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ಮತ್ತು ಶುಲ್ಕ ಪಾವತಿಯ ಚಲನ್ ಅನ್ನು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಭದ್ರವಾಗಿ ತೆಗೆದಿಟ್ಟುಕೊಂಡಿರತಕ್ಕದ್ದು.

(2) ಈಗಾಗಲೇ ಸೇವೆಯಲ್ಲಿರುವ / ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಅವರುಗಳ ನೇಮಕಾತಿ ಪ್ರಾಧಿಕಾರಿಗಳಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅನುಮತಿಯನ್ನು/ಸೇವಾ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ವಿವರಗಳನ್ನು ಅರ್ಜಿಯಲ್ಲಿ ನಮೂದಿಸತಕ್ಕದ್ದು ಮತ್ತು ಇದೇ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಸಂದರ್ಶನದ / ಮೂಲ ದಾಖಲಾತಿಯ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು ತಪ್ಪಿದ್ದಲ್ಲಿ ಅನರ್ಹಗೊಳಿಸಲಾಗುವುದು.

(3) ಶುಲ್ಕ ಪಾವತಿಸಲು ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಕೊನೆಯ ದಿನಾಂಕವಾಗುವುದು.

18. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:

ಕೇಂದ್ರ ಕಛೇರಿಯ ಮಾಹಿತಿ ಕೇಂದ್ರ :	**080–30574957 080–30574901**
	080–22343137 080–22343138
	080–22343139 080–30574917
	080–30574938 080–30574938
	080–30574940
ಪ್ರಾಂತೀಯ ಕಛೇರಿ ಮೈಸೂರು	**: 0821–2545956**
ಪ್ರಾಂತೀಯ ಕಛೇರಿ ಬೆಳಗಾವಿ	**: 0831–2475345**
ಪ್ರಾಂತೀಯ ಕಛೇರಿ ಗುಲ್ಬರ್ಗಾ	**: 08472–227944**
ಪ್ರಾಂತೀಯ ಕಛೇರಿ ಶಿವಮೊಗ್ಗ	**: 08182–228099**

19. ದುರ್ನಡತೆ:– ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ / ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಹುದ್ದೆಯ ಸಂದರ್ಶನದಿಂದ / ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಮನೋಜ್ ಕುಮಾರ್ ಮೀನಾ ಭಾ.ಆ.ಸೇ

ಕಾರ್ಯದರ್ಶಿ,

ಕರ್ನಾಟಕ ಲೋಕ ಸೇವಾ ಆಯೋಗ

(ಪ.ಜಾ / ಪ.ಪಂ ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ – ಡಿ

(ನಿಯಮ 3ಎ (2) (3) ನೋಡಿ)

ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ/ಪ.ಪಂ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ

ನಮೂನೆ

ಪ್ರಮಾಣ ಪತ್ರ

.... ರಾಜ್ಯದ / ಕೇಂದ್ರಾಡಳಿತ ಪ್ರದೇಶದ * .... ಜಿಲ್ಲೆಯ / ವಿಭಾಗದ .... ಗ್ರಾಮ / ಪಟ್ಟಣದ * ನಿವಾಸಿಯಾದ ಶ್ರೀ / ಶ್ರೀಮತಿ .... ಎಂಬುವವರ ಮಗ / ಮಗಳಾದ ಶ್ರೀ / ಶ್ರೀಮತಿ .... ಇವರು ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು * ಎಂದು ಮಾನ್ಯ ಮಾಡಲಾಗಿರುವ ಜಾತಿ/ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣೀಕರಿಸಿದೆ.

- ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950+
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ತಾಜ್ಯ ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971ರ ಮೂಲ ತಿದ್ದುಪಡಿಯಾದಂತೆ)

- ಸಂವಿಧಾನ
- ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956
- ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959.
- ಸಂವಿಧಾನ (ದಾದರ್ ಮತ್ತು ನಾಗರಹವೇಲಿ) ಅನುಸೂಚಿತ ಜಾತಿಗಳ ಆದೇಶ 1962
- ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967
- ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ/ಬುಡಕಟ್ಟುಗಳ ಆದೇಶ 1988
- ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

2. ಶ್ರೀ/ಶ್ರೀಮತಿ/ಕುಮಾರಿ * .... ಮತ್ತು / ಅಥವಾ ಅವನ* / ಅವಳ* ಕುಟುಂಬವು ....ರಾಜ್ಯ / ಕೇಂದ್ರಾಡಳಿತ ಪ್ರದೇಶದ .... ಜಿಲ್ಲಾ / ವಿಭಾಗದ ....ಗ್ರಾಮ / ಪಟ್ಟಣದ ಸಾಮಾನ್ಯ ನಿವಾಸಿ (ಗಳು)

ಸಹಿ..

ತಹಶೀಲ್ದಾರ್..

ಸ್ಥಳ : ಪದನಾಮ

ದಿನಾಂಕ: ಕಛೇರಿಯ ಮೊಹರಿನೊಂದಿಗೆ

ರಾಜ್ಯ / ಕೇಂದ್ರಾಡಳಿತ ಪ್ರದೇಶ *

* ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟು ಬಿಡಿ / ಹೊಡೆದು ಹಾಕಿ

ಸೂಚನೆ: ಇಲ್ಲಿ ಉಪಯೋಗಿಸಿದ 'ಸಾಮಾನ್ಯ ನಿವಾಸಿಗಳು' ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950ರ 20ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

ಭಾರತ ಸರ್ಕಾರದ ಪತ್ರ ಸಂಖ್ಯೆ: ಬಿಸಿ 12028/2/76–ಎಸ್‌ಸಿಟಿ–1 ಗೃಹ ಮಂತ್ರಾಲಯ ಅನುಸಾರವಾಗಿ, ಅಂಥ ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮವಾಗಿರುವುದಕ್ಕಾಗಿ, ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ) ಪತ್ರ ಸಂಖ್ಯೆ:13–2–74 ಇಎಸ್‌ಟಿ (ಎಸ್‌ಸಿಟಿ) ದಿನಾಂಕ: 05.08.1975ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು, ತನ್ನ ಖಾಯಂ ವಾಸ ಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು. ಅದೇ ರೀತಿಯಲ್ಲಿ ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಿಯು ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗುವುದಿಲ್ಲ.

(ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)
ನಮೂನೆ – ಇ
(ನಿಯಮ 3ಎ (2) (3) ನೋಡಿ)
ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ

________________________________ಗ್ರಾಮ / ಪಟ್ಟಣದ / ನಗರ ನಿವಾಸಿಯಾದ ಶ್ರೀ / ಶ್ರೀಮತಿ ________________________________ಇವರ ಮಗ / ಮಗಳು / ಪತ್ನಿ / ಪತಿಯಾದ ಶ್ರೀ / ಶ್ರೀಮತಿ ____________________ ಇವರು ಹಿಂದುಳಿದ ವರ್ಗಗಳ (ಪ್ರವರ್ಗ) ________________ಜಾತಿಯ ____________ ಉಪಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ :
ದಿನಾಂಕ :

ತಹಶೀಲ್ದಾರ್
__________ತಾಲ್ಲೂಕು
ಕಛೇರಿಯ ಮೊಹರು

(ಪ್ರವರ್ಗ – 2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)
ನಮೂನೆ – ಎಫ್
(ನಿಯಮ 3ಎ (2) (3)ನ್ನು ನೋಡಿ)
ಹಿಂದುಳಿದ ವರ್ಗಗಳಿಗೆ (2ಎ, 2ಬಿ. 3ಎ, 3ಬಿ) ಸೇರಿದ ಅಭ್ಯರ್ಥಿಗೆ ನೀಡುವ ಆದಾಯ ಮತ್ತು
ಜಾತಿ ಪ್ರಮಾಣ ಪತ್ರ

________________ ರಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ ______________ ಇವರ ಮಗ / ಮಗಳು / ಪತಿ / ಪತ್ನಿಯಾದ ಶ್ರೀ / ಶ್ರೀಮತಿ / ಕುಮಾರಿ ____________ ಇವರು ಮತ್ತು ಆತನ / ಅವಳ ತಂದೆ / ತಾಯಿ / ಪೋಷಕರು / ಪತ್ನಿ / ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ:ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ: 30.03.2002 ರಲ್ಲಿ ನಿರ್ದಿಷ್ಟ ಪಡಿಸಿದ ಮೇಲುಸ್ತರದ (ಕ್ರೀಮಿಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು;

ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕರಾಗಲಿ / ಪತ್ನಿ / ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1 ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು;

ಅಥವಾ

ಸಾರ್ವಜನಿಕ ವಲಯ ಉದ್ಯಮಯಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ;

ಅಥವಾ

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ.11400–21600/– ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು;

ಅಥವಾ

ಆತನ / ಅಕೆಯ ತಂದೆ ತಾಯಿ/ ಪೋಷಕರು / ಪತ್ನಿ / ಪತಿಯ ಆದಾಯವು ಮೂರುವರೆ ಲಕ್ಷ ಮೀರುವುದಿಲ್ಲವೆಂದು;

ಅಥವಾ

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ರಲ್ಲಿ ನಿಗದಿಪಡಿಸಿರುವಂತೆ ಆತನ / ಆಕೆಯ ತಂದೆ ತಾಯಿ / ಪೋಷಕರು / ಪತ್ನಿ / ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕ / ಪತ್ನಿ / ಪತಿಯು ಅಥವಾ ಇವರಿಬ್ಬರೂ 10 ಯುನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ: 30.03.2002ರ ಅನ್ವಯ ಶ್ರೀ / ಶ್ರೀಮತಿ / ಕುಮಾರಿ__________ಇವರು __________ ಜಾತಿಗೆ ______________ಸೇರಿದ ಉಪಜಾತಿಯವರಾಗಿದ್ದು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ: 30.03.2002ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ ____________ (2ಎ, 2ಬಿ, 3ಎ, 3ಬಿ)ಕ್ಕೆ ಸೇರಿರುತ್ತಾರೆ.

ಸ್ಥಳ :
ದಿನಾಂಕ:

ತಹಶೀಲ್ದಾರ್
__________ತಾಲ್ಲೂಕು
ಕಛೇರಿಯ ಮೊಹರು

ನಮೂನೆ – 1

ಜನರಲ್ ಮೆರಿಟ್ ಅಭ್ಯರ್ಥಿಗಳು ಮೇಲುಸ್ತರಕ್ಕೆ ಸೇರಿಲ್ಲವೆಂದು, ದೃಢೀಕರಿಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣ ಪತ್ರ

(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿ ಮಾಡಬೇಕಾದ ನಮೂನೆ)

ಇವರಿಗೆ:

ತಹಶೀಲ್ದಾರರು

________________ತಾಲ್ಲೂಕು

________________ ಜಿಲ್ಲೆ

ಮಾನ್ಯರೆ,

ಶ್ರೀ / ಶ್ರೀಮತಿ ________________________________ಎಂಬುವವರ ಮಗ / ಮಗಳು / ಪತಿ / ಪತ್ನಿ ______________________________ ಆದ ನಾನು ಮೇಲುಸ್ತರದಲ್ಲಿ (Creamy Layer) ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ :
2. ಅಭ್ಯರ್ಥಿಯ ಸ್ವಂತ ಸ್ಥಳ ಗ್ರಾಮ :
   ತಾಲ್ಲೂಕು :
   ಜಿಲ್ಲೆ :
3. ಅಭ್ಯರ್ಥಿಯು ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ :
4. ಅಭ್ಯರ್ಥಿಯ ತಂದೆ/ತಾಯಿ/ಪೋಷಕರ ಪತಿಯ/ಪತ್ನಿಯ ಹೆಸರು ಮತ್ತು ಉದ್ಯೋಗ :
   (ಉದ್ಯೋಗವು ಸರ್ಕಾರಿ/ಅರೆ ಸರ್ಕಾರಿ/ಸಾರ್ವಜನಿಕ ಉದ್ಯಮ/ಖಾಸಗಿ)
5. ಅಭ್ಯರ್ಥಿಯ ಪ್ರಸ್ತುತ ವಿಳಾಸ :
   (ಸ್ಪಷ್ಟವಾಗಿ ನಮೂದಿಸುವುದು)
6. ಅಭ್ಯರ್ಥಿಯ ಖಾಯಂ ವಿಳಾಸ :
7. ಅಭ್ಯರ್ಥಿಯ ಶಾಲಾ ಶಿಕ್ಷಣದ ವ್ಯಾಸಂಗ ಮಾಡಿದ ಶಾಲೆಗಳ ವಿವರಗಳು
   ಪ್ರಾಥಮಿಕ
   ಮಾಧ್ಯಮಿಕ
   ಪ್ರೌಢ
8. ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ/ತಾಯಿ/ಪೋಷಕರ (ತಂದೆ/ತಾಯಿ ಜೀವಂತವಿಲ್ಲದಿದ್ದರೆ)
   ಇವರ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ:
   1) ವೇತನ ಶ್ರೇಣಿ
   2) ಜಮೀನಿನ ವಿವರ
   3) ಇತರ ಮೂಲಗಳು
9. ಆದಾಯ ತೆರಿಗೆ ಪಾವತಿದಾರರೇ?
10. ಸಂಪತ್ತು ತೆರಿಗೆ ಪಾವತಿದಾರರೇ?
11. ಮಾರಾಟ ತೆರಿಗೆ ಪಾವತಿದಾರರೇ?

ನಮೂನೆ – 2

ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ಶ್ರೀಮತಿ ______________________ ರವರ ಮಗ/ ಮಗಳು/ ಪತಿ/ ಪತ್ನಿ/ ಶ್ರೀ/ಶ್ರೀಮತಿ/ಕುಮಾರಿ__________ ಜಿಲ್ಲೆ __________ ತಾಲ್ಲೂಕು__________ ಗ್ರಾಮದಲ್ಲಿ __________ ವಾಸವಾಗಿರುವ ಇವರು ಒಂದನೇ ತರಗತಿಯಿಂದ __________ ತರಗತಿಯವರೆಗೆ __________ ಜಿಲ್ಲೆ __________ ತಾಲ್ಲೂಕು________ ಪಟ್ಟಣ ______ ಶಾಲೆಯಲ್ಲಿ ವ್ಯಾಸಂಗ ಮಾಡಿ______ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿ ಒಂದು ದೊಡ್ಡ ನಗರ ಪ್ರದೇಶ ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು.

ಮೇಲು ರುಜು — ಸಹಿ

ಕ್ಷೇತ್ರ ಶಿಕ್ಷಣ ಅಧಿಕಾರಿ — ಮುಖ್ಯೋಪಾಧ್ಯಾಯರ ಸಹಿ

ಕಛೇರಿಯ ಮೊಹರು — ಮತ್ತು ಸಂಸ್ಥೆಯ ಮೊಹರು

ಸ್ಥಳ :

ದಿನಾಂಕ :

ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 44 ಸೆನೆನಿ 2001 ದಿನಾಂಕ: 27.07.2001

ನಮೂನೆ – 3

ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿ

ಶ್ರೀ/ಶ್ರೀಮತಿ ______________________ ಎಂಬುವವರ ಮಗ/ ಮಗಳು/ ಪತಿ/ ಪತ್ನಿ/ ಶ್ರೀ/ಶ್ರೀಮತಿ/ಕುಮಾರಿ __________ಜಿಲ್ಲೆ ತಾಲ್ಲೂಕು __________ಗ್ರಾಮದಲ್ಲಿ __________ ವಾಸವಾಗಿರುವ ಇವರು : ಇವರ ಕುಟುಂಬದವರ ಅವಲಂಬಿತರಾಗಿದ್ದ ಈ ಕೆಳಕಂಡ ಆಸ್ತಿಯನ್ನು __________ ಯೋಜನೆಗಾಗಿ __________ ಇಸವಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ:–

(ಅ) * * ವಾಸಿಸುವ ಮನೆ ಮತ್ತು ತಾವು ಅವಲಂಬಿತರಾಗಿದ್ದ ಅವರ ಕೃಷಿ ಭೂಮಿಯ ಅರ್ಧದಷ್ಟು

(ಆ) * * ಯೋಜನೆಗೆ ಮೊದಲು ಭೂಮಿಯನ್ನು ಹೊಂದಿರದೆ: ಯೋಜನೆಯಿಂದ ತಾವು ವಾಸಿಸುವ ಮನೆ :

(ಇ) * * ತಾವು ಅವಲಂಬಿತರಾಗಿದ್ದ ತಮ್ಮ ಕೃಷಿ ಭೂಮಿಯ ಅರ್ಧದಷ್ಟು ಅಥವಾ ಅದಕ್ಕಿಂತ ಕಡಿಮೆ ಕೃಷಿ ಭೂಮಿ :

(ಈ) * * ಇತರ ಇನ್ನಾವುದೇ ಪ್ರಕರಣದಲ್ಲಿ ಯೋಜನೆಯಿಂದ ನಿರ್ವಸಿತರಾದವರು.

ಸ್ಥಳ : — ತಹಶೀಲ್ದಾರ್

ದಿನಾಂಕ: — __________ತಾಲ್ಲೂಕು

ಕಛೇರಿಯ ಮೊಹರು

ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ

ಶ್ರೀ/ಶ್ರೀಮತಿ__________ರವರ ಮಗ/ಮಗಳು/ಪತಿ/ಪತ್ನಿ/ಶ್ರೀಮತಿ/ಕುಮಾರಿ__________ ಜಿಲ್ಲೆ __________ ತಾಲ್ಲೂಕು __________ ಗ್ರಾಮದಲ್ಲಿ ವಾಸವಾಗಿರುವ ಇವರು ________ನೇ ತರಗತಿಯಿಂದ __________ ನೇ ತರಗತಿಯವರೆಗೆ __________ ಶೈಕ್ಷಣಿಕ ವರ್ಷದಿಂದ ________ ಶೈಕ್ಷಣಿಕ ವರ್ಷದವರೆಗೆ ________ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆಂದು ಪ್ರಮಾಣಿಕರಿಸಲಾಗಿದೆ.

ಸ್ಥಳ:

ದಿನಾಂಕ: — ಮುಖ್ಯೋಪಾಧ್ಯಾಯರ ಸಹಿ ಮತ್ತು ಸಂಸ್ಥೆಯ ಮೊಹರು

ಪ್ರಮಾಣೀಕೃತ ಘೋಷಣೆ

ಈ ಮೇಲೆ ನನ್ನಿಂದ ಒದಗಿಸಿದ ಮಾಹಿತಿ / ವಿವರಣೆಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ: ತಮ್ಮ ವಿಧೇಯ

ದಿನಾಂಕ: (ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತಾ, ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗುರುತ್ತೇನೆ

ಸ್ಥಳ: ತಂದೆ/ತಾಯಿ/ಪೋಷಕರ ಸಹಿ

ದಿನಾಂಕ: (ತಂದೆ/ತಾಯಿ ಜೀವಂತವಿಲ್ಲದಿದ್ದರೆ)

(ಹೆಂಡತಿ/ಗಂಡ/ಇವರ ಸಹಿ)

ಸ್ಥಳೀಯ ಇಬ್ಬರು ಸಾಕ್ಷಿದಾರರು

ಅಭ್ಯರ್ಥಿಯ ಮತ್ತು ಅವರ ತಂದೆ/ತಾಯಿ/ಪೋಷಕರು/ಪತಿ/ಪತ್ನಿ ಇವರನ್ನು ಹಾಗೂ ಇವರ ಸಹಿಯನ್ನು ಗುರುತಿಸುತ್ತೇವೆ.

ಸಕ್ಷಿದಾರರ ಸಹಿ 1)
(ಪೂರ್ಣ ವಿಳಾಸದೊಂದಿಗೆ) 2)

ಪರಿಶೀಲನಾ ಪ್ರಮಾಣ ಪತ್ರ

1. ಶ್ರೀ/ಶ್ರೀಮತಿ ಎಂಬುವವರ ಮಗ/ ಮಗಳು/ ಪತಿ/ ಪತ್ನಿ ಶ್ರೀ/ಶ್ರೀಮತಿ/ಕುಮಾರಿ ಎಂಬುವವರು ಕರ್ನಾಟಕ ರಾಜ್ಯದ ಜಿಲ್ಲೆಯ ವಿಭಾಗ ಗ್ರಾಮ/ಪಟ್ಟಣ/ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆ ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.

2. ಶ್ರೀ/ಶ್ರೀಮತಿ/ಕುಮಾರಿ ಇವರ ತಂದೆ/ತಾಯಿ/ಪೋಷಕರು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 251 ಬಿಸಿಎ 94, ಬೆಂಗಳೂರು, ದಿನಾಂಕ: 31.01.1995 ರನ್ವಯ ಜನರಲ್ ಮೆರಿಟ್ ವರ್ಗದ ಮೇಲುಸ್ತರದಲ್ಲಿ (Creamy Layer) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ : ತಹಶೀಲ್ದಾರ್
ದಿನಾಂಕ: ______________ತಾಲ್ಲೂಕು

ಕಛೇರಿಯ ಮೊಹರು

ಸೂಚನೆ–1 : ಇದರಲ್ಲಿ ಉಪಯೋಗಿಸಲಾದ 'ಸಾಮಾನ್ಯ ನಿವಾಸಿ' ಎಂಬ ಪದವು 1950ರ ಜನತಾ ಪ್ರಾತಿನಿಧ್ಯ ಕಾಯ್ದೆಯ 20ನೇ ಅನುಚ್ಛೇದದಲ್ಲಿನ ಅರ್ಥವನ್ನು ಹೊಂದಿರುತ್ತದೆ.
ಸೂಚನೆ–2: ಪರಿಶೀಲನಾ ಪ್ರಮಾಣ ಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ 251 ಬಿಸಿಎ 94, ಬೆಂಗಳೂರು, ದಿನಾಂಕ: 31.01.1995 ರನ್ವಯ ಮೇಲುಸ್ತರ (Creamy Layer) ದವರನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪ್ರಮಾಣ ಪತ್ರ ನೀಡತಕ್ಕದ್ದು

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 115 ಸೆನೆನಿ 2005, ದಿನಾಂಕ: 19.11.2005

CERTIFICATE FOR THE PERSONS WITH DISABILITIES

This is to certify that Sri / Smt / Kum ………………………………………………… son / wife / daughter of Shri ……………………………………….. ……………………
Age ………………………… old, male / female, Registration No …………………………… is a case of ……………………... He / She is physically disabled/visual disabled/speech
& hearing disabled and has …………………….. % (……………………percent) permanent (physical impairment visual impairment speech & hearing impairment) in relation to his / her ……………………………

Note :

1. This condition is progressive/non-progressive/likely to improve/not likely to improve. *
2. Re-assessment is not recommended/is recommended after a period of ………………… months/years. *

* Strike out which is not applicable

(Recent Attested Photograph showing the disability affixed here)

Sd/-	Sd/-	Sd/-
(Doctor)	(Doctor)	(Doctor)
(Seal)	(Seal)	(Seal)

Countersigned by the Medical Superintendent CMO/Head of Hospital (with seal)

Signature / Thumb impression of the disabled person

ರಾಜ್ಯ ಸರ್ಕಾರಿ/ ಕೇಂದ್ರ ಸರ್ಕಾರಿ ನೌಕರರು ಒದಗಿಸಬೇಕಾದ ಪ್ರಮಾಣ ಪತ್ರ

ಶ್ರೀ / ಶ್ರೀಮತಿ____________________ರವರು ರಾಜ್ಯ / ಕೇಂದ್ರ ಸರ್ಕಾರದಲ್ಲಿ____________________(ಪದನಾಮ)__________ ____________________ಇಲಾಖೆಯಲ್ಲಿ ಖಾಯಂ / ತಾತ್ಕಾಲಿಕ ಹುದ್ದೆಯನ್ನು ದಿನಾಂಕ .__________ರಿಂದ __________ ರವರೆಗೆ ಹೊಂದಿರುವರು.. ಈ ಹುದ್ದೆಗೆ ಇವರು ನೇಮಕಾತಿ ನಿಯಮಗಳಡಿ ಆಯ್ಕೆಯಾಗಿದ್ದು, ಸದರಿ ಹುದ್ದೆಗೆ ಅರ್ಜಿ ಸಲ್ಲಿಸಲು ಅವರಿಗೆ ಅನುಮತಿ ನೀಡಲಾಗಿದೆ.

ಸ್ಥಳ: ನೇಮಕಾತಿ ಪ್ರಾಧಿಕಾರದ ಸಹಿ/

ದಿನಾಂಕ ಇಲಾಖೆಯ ಹೆಸರು ಮತ್ತು ಮೊಹರುನೊಂದಿಗೆ

CERTIFICATE TO BE FURNISHED BY THE STATE/CENTRAL GOVT. SERVANTS

Certified that Sri / Smt …………………………………………………...holds a permanent / temporary post under the State / Central Govt. as …………………………...(Designation) in the dept. of ………………………………………… from………………………having been appointed therein under the rules of recruitment. He /She is permitted to apply for the said post.

Place : **Signature of the appointing authority**

Date: **of the department / with name and seal.**

ಅನುಬಂಧ – ಎ

ಅರ್ಹತಾ ಪ್ರಮಾಣ ಪತ್ರ

(ಅನುಚ್ಛೇಧ 371(ಜೆ)ಮೇರೆಗೆ)

(3(3)ನೇ ನಿಯಮ ನೋಡಿ)

(ಪ್ರಮಾಣ ಪತ್ರ ನೀಡಲು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು 2013)

ಶ್ರೀ / ಶ್ರೀಮತಿ ______________________ರವರು ______________________

ರವರ ಮಗ / ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ ______________ ಜಿಲ್ಲೆಯ______________ ತಾಲ್ಲೂಕಿನ ______________________ ಗ್ರಾಮ / ಪಟ್ಟಣದ ಸ್ಥಳೀಯ ವ್ಯಕ್ತಿಯಾಗಿದ್ದಾರೆ.

ಸ್ಥಳ: ________________ ಹೆಸರು ______________________

ದಿನಾಂಕ: ________________ ಅಸಿಸ್ಟೆಂಟ್ ಕಮೀಷನರ್

______________ ಉಪವಿಭಾಗ

______________ ಜಿಲ್ಲೆ

ಅನುಬಂಧ–1 (Annexure-I)

ದಿನಾಂಕ 25–09–2014 ರ ಅಧಿಸೂಚನೆಯ ಭಾಗ–1 ರಲ್ಲಿ ಅಧಿಸೂಚಿಸಿರುವ ವಿವಿಧ ತಾಂತ್ರಿಕ / ತಾಂತ್ರಿಕೇತರ ಹುದ್ದೆಗಳಿಗೆ ಆಯೋಗವು ನಡೆಸಲಿರುವ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ/ ಸ್ಪರ್ಧಾತ್ಮಕ ಪರೀಕ್ಷೆಯ ವೇಳಾಪಟ್ಟಿ

ದಿನಾಂಕ	ಸಮಯ	ಇಲಾಖೆಯ ಹೆಸರು / ಹುದ್ದೆಯ ಪದನಾಮ	ವಿಷಯ
06–12–2014 ಶನಿವಾರ	ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 1:00 ಗಂಟೆಯವರೆಗೆ	ದಿನಾಂಕ 25–09–2014 ರ ಅಧಿಸೂಚನೆಯ ಭಾಗ–1 ರಲ್ಲಿ ಅಧಿಸೂಚಿಸಿರುವ ಎಲ್ಲಾ ಹುದ್ದೆಗಳಿಗೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ – ವಿನಾಯಿತಿ ಇಲ್ಲದ ಅಭ್ಯರ್ಥಿಗಳಿಗೆ	ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ
	ಮಧ್ಯಾಹ್ನ 2:00 ಗಂಟೆಯಿಂದ ಸಂಜೆ 4:00 ಗಂಟೆಯವರೆಗೆ	**ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದಲ್ಲಿನ :** 1) ಕನ್ನಡ ಭಾಷಾ ಶಿಕ್ಷಕರು 2) ಆಂಗ್ಲ ಭಾಷಾ ಶಿಕ್ಷಕರು 3) ಹಿಂದಿ ಭಾಷಾ ಶಿಕ್ಷಕರು 4) ಉರ್ದು ಶಿಕ್ಷಕರು 5) ಗಣಿತ ಶಿಕ್ಷಕರು 6) ಸಾಮಾನ್ಯ ವಿಜ್ಞಾನ ಶಿಕ್ಷಕರು 7) ಸಮಾಜ ವಿಜ್ಞಾನ ಶಿಕ್ಷಕರು 8) ದೈಹಿಕ ಶಿಕ್ಷಕರು 9) ಗಣಕ ಯಂತ್ರ ಶಿಕ್ಷಕರು 10) ವಾರ್ತಾ ಇಲಾಖೆಯಲ್ಲಿ ಹಿರಿಯ ಸಹಾಯಕ ನಿರ್ದೇಶಕರು 11) ವಾರ್ತಾ ಇಲಾಖೆಯಲ್ಲಿ ಸ್ವಾಗತಕಾರ ಹಾಗೂ ಗ್ರಂಥಪಾಲಕರು 12) ಸಹಕಾರ ಇಲಾಖೆಯಲ್ಲಿನ ಸಹಕಾರ ಸಂಘಗಳ ನಿರೀಕ್ಷಕರು	ನಿರ್ದಿಷ್ಟ ಪತ್ರಿಕೆ
7–12–2014 ಭಾನುವಾರ	ಬೆಳಿಗ್ಗೆ 10:00 ಗಂಟೆಯಿಂದ 11:30 ಗಂಟೆಯವರೆಗೆ	1) ವಾರ್ತಾ ಇಲಾಖೆಯಲ್ಲಿ ಹಿರಿಯ ಸಹಾಯಕ ನಿರ್ದೇಶಕರು 2) ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರು 3) ರೇಷ್ಮೆ ಇಲಾಖೆಯಲ್ಲಿ ಸಹಾಯಕ ಅಭಿಯಂತರರು(ಸಿವಿಲ್) 4) ವಾರ್ತಾ ಇಲಾಖೆಯಲ್ಲಿ ಸ್ವಾಗತಕಾರ ಹಾಗೂ ಗ್ರಂಥಪಾಲಕರು **ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದಲ್ಲಿನ :** 5) ಕನ್ನಡ ಭಾಷಾ ಶಿಕ್ಷಕರು 6) ಆಂಗ್ಲ ಭಾಷಾ ಶಿಕ್ಷಕರು 7) ಹಿಂದಿ ಭಾಷಾ ಶಿಕ್ಷಕರು 8) ಉರ್ದು ಶಿಕ್ಷಕರು 9) ಗಣಿತ ಶಿಕ್ಷಕರು 10) ಸಾಮಾನ್ಯ ವಿಜ್ಞಾನ ಶಿಕ್ಷಕರು 11) ಸಮಾಜ ವಿಜ್ಞಾನ ಶಿಕ್ಷಕರು	ಸಾಮಾನ್ಯ ಅಧ್ಯಯನ

		12) ದೈಹಿಕ ಶಿಕ್ಷಕರು 13) ಗಣಕ ಯಂತ್ರ ಶಿಕ್ಷಕರು 14) ಮೊರಾರ್ಜಿದೇಸಾಯಿ ವಸತಿ ಶಾಲೆಯ ನಿಲಯ ಪಾಲಕರು 15) ಪ್ರಥಮ ದರ್ಜೆ ಗಣಕಯಂತ್ರ ಸಹಾಯಕರು 16) ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯ ಪಾಲಕರು (ಪುರುಷ) 17) ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯ ಪಾಲಕರು (ಮಹಿಳೆ) 18) ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಮೇಲ್ವಿಚಾರಕರು (ಪುರುಷ) 19) ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ ಮೇಲ್ವಿಚಾರಕರು (ಮಹಿಳೆ) 20) ಸಹಕಾರ ಇಲಾಖೆಯಲ್ಲಿನ ಸಹಕಾರ ಸಂಘಗಳ ನಿರೀಕ್ಷಕರು 21) ವಾರ್ತಾ ಇಲಾಖೆಯಲ್ಲಿ ವಾರ್ತಾ ಸಹಾಯಕರು 22) ಔಷಧ ನಿಯಂತ್ರಣ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರು (ಫಾರ್ಮಕಾಗ್ನಸಿ) 23) ಔಷಧ ನಿಯಂತ್ರಣ ಇಲಾಖೆಯ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರು (ಫಾರ್ಮಸ್ಯುಟಿಕ್ಸ್)	
	ಮಧ್ಯಾಹ್ನ 2:00 ಗಂಟೆಯಿಂದ ಸಂಜೆ 4:00 ಗಂಟೆಯವರೆಗೆ	**ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದಲ್ಲಿನ:** 1) ಮೊರಾರ್ಜಿದೇಸಾಯಿ ವಸತಿ ಶಾಲೆಯ ನಿಲಯ ಪಾಲಕರು 2) ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯ ಪಾಲಕರು (ಪುರುಷ) 3) ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯ ಪಾಲಕರು (ಮಹಿಳೆ) 4) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವಸತಿ ನಿಲಯ ಮೇಲ್ವಿಚಾರಕರು (ಪುರುಷ) 5) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವಸತಿ ನಿಲಯ ಮೇಲ್ವಿಚಾರಕರು (ಮಹಿಳೆ) 6) ರೇಷ್ಮೆ ಇಲಾಖೆಯಲ್ಲಿ ಸಹಾಯಕ ಅಭಿಯಂತರರು(ಸಿವಿಲ್) 7) ವಾರ್ತಾ ಇಲಾಖೆಯಲ್ಲಿ ವಾರ್ತಾ ಸಹಾಯಕರು 8) ಪ್ರಥಮ ದರ್ಜೆ ಗಣಕಯಂತ್ರ ಸಹಾಯಕರು 9) ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಹಿಳಾ ಶುಶ್ರೂಷಕಿಯರು	ನಿರ್ದಿಷ್ಟ ಪತ್ರಿಕೆ
08–12–2014 ಸೋಮವಾರ	ಬೆಳಿಗ್ಗೆ 10:00 ಗಂಟೆಯಿಂದ 11:30 ಗಂಟೆಯವರೆಗೆ	1) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಲ್ಲಿ ಗ್ರಂಥಪಾಲಕರು 2) ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದಲ್ಲಿ ಆರ್ಟ್ ಮತ್ತು ಕ್ರಾಫ್ಟ್ ಶಿಕ್ಷಕರು 3) ಮೊರಾರ್ಜಿದೇಸಾಯಿ ವಸತಿ ಶಾಲೆಯ ಮಹಿಳಾ ಶುಶ್ರೂಷಕಿಯರು	ಸಾಮಾನ್ಯ ಅಧ್ಯಯನ
	ಮಧ್ಯಾಹ್ನ 2:00 ಗಂಟೆಯಿಂದ ಸಂಜೆ 4:00 ಗಂಟೆಯವರೆಗೆ	1) ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರು 2) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಲ್ಲಿ ಗ್ರಂಥಪಾಲಕರು 3) ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದಲ್ಲಿ ಆರ್ಟ್ ಮತ್ತು ಕ್ರಾಫ್ಟ್ ಶಿಕ್ಷಕರು 4) ಔಷಧ ನಿಯಂತ್ರಣ ಇಲಾಖೆಯ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರು (ಫಾರ್ಮಕಾಗ್ನಸಿ) 5) ಔಷಧ ನಿಯಂತ್ರಣ ಇಲಾಖೆಯ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರು (ಫಾರ್ಮಸ್ಯುಟಿಕ್ಸ್)	ನಿರ್ದಿಷ್ಟ ಪತ್ರಿಕೆ

ಆರ್.ವೆಂಕಟೇಶ್ ಕುಮಾರ್ ಭಾ. ಆ. ಸೇ.,

ಪರೀಕ್ಷಾ ನಿಯಂತ್ರಕರು,

ಕರ್ನಾಟಕ ಲೋಕ ಸೇವಾ ಆಯೋಗ

ನಮೂನೆ

ದೃಢೀಕರಣ ಪ್ರಮಾಣ ಪತ್ರ

ಹೊರ ಸಂಪನ್ಮೂಲದಿಂದ ನೇಮಕಗೊಂಡು ದಿನಾಂಕ: 01.04.2014 ರಲ್ಲಿದ್ದಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸಿದ ಹೊರಸಂಪನ್ಮೂಲ ಪ್ರಾಂಶುಪಾಲರು ಮತ್ತು ಸಹ ಶಿಕ್ಷಕರುಗಳ ಸೇವಾ ವಿವರಗಳೂ ಈ ಕೆಳಗಿನಂತೆ ಇವೆ ಎಂದು ಅವಶ್ಯಕ ದಾಖಲಾತಿಗಳೊಂದಿಗೆ ದೃಢೀಕರಿಸಿದೆ. ಶ್ರೀ/ಶ್ರೀಮತಿ/ಕುಮಾರಿ ______________ ರವರು ಹೊರ ಸಂಪನ್ಮೂಲ ಪ್ರಾಂಶುಪಾಲರಾಗಿ, ______________ಭಾಷಾ ಶಿಕ್ಷಕರಾಗಿ (ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು), ______________ವಿಷಯ ಶಿಕ್ಷಕರಾಗಿ (ವಿಜ್ಞಾನ, ಸಮಾಜ–ವಿಜ್ಞಾನ, ಗಣಿತ, ದೈಹಿಕ ಶಿಕ್ಷಕರು, ಕಂಪ್ಯೂಟರ್ ಶಿಕ್ಷಕರು, ಆರ್ಟ್ಸ್ & ಕ್ರಾಫ್ಟ್ ಶಿಕ್ಷಕರು) ಈ ಕೆಳಕಂಡ ವಸತಿ ಶಾಲೆಗಳಲ್ಲಿ ಸದರಿ ವಸತಿ ಶಾಲೆಯ ಎದುರಿಗೆ ನಮೂದಿಸಿರುವ ಅವಧಿಯಲ್ಲಿ ಸೇವೆ ಸಲ್ಲಿಸಿರುತ್ತಾರೆ.

ಕ್ರ. ಸಂ	ವಸತಿ ಶಾಲೆಯ ಹೆಸರು ಮತ್ತು ವಿಳಾಸ	ಶಾಲೆಯ ವರ್ಗ	ಕಾರ್ಯ ನಿರ್ವಹಿಸಿದ ಶೈಕ್ಷಣಿಕ ವರ್ಷ	ನಿರ್ವಹಿಸಿದ ಹುದ್ದೆ (ಪ್ರಾಂಶುಪಾಲರು/ ಸಹ ಶಿಕ್ಷಕರು	ವಿದ್ಯಾರ್ಹತೆ*			ಸೇವೆ ಸಲ್ಲಿಸಿದ ಅವಧಿ**		ಶಿಕ್ಷಕರಾಗಿ ಬೋಧನೆ ಮಾಡಿದ ವಿಷಯ	ಹೊರ ಗುತ್ತಿಗೆ ಸಂಸ್ಥೆಯ ಹೆಸರು	ಆದೇಶ ಸಂಖ್ಯೆ ಮತ್ತು ನೇಮಕಾತಿ ದಿನಾಂಕ
					ಸ್ನಾತಕೋತ್ತರ ಪದವಿ	ಪದವಿ	ತರಬೇತಿ	ಇಂದ (ಆ/ಒ/Y)	ವರೆಗೆ (ಆ/ಒ/Y)			
1												
2												
3												
4												
5												
6												
7												

ವಿ.ಸೂ: * ವಿದ್ಯಾರ್ಹತೆಯ ವಿವರಗಳನ್ನು ನೀಡುವಾಗ ಅಭ್ಯರ್ಥಿಯು ತನ್ನ ಹುದ್ದೆಗೆ ನಿಗದಿಪಡಿಸಿದೆ ಸ್ನಾತಕೋತ್ತರ ಪದವಿ ಮತ್ತು ಈ ಸ್ನಾತಕೋತ್ತರ ಪದವಿಯ ವಿಷಯ, ಪದವಿ ಮತ್ತು ಪದವಿಯನ್ನು ತಾನು ಓದಿದ ಐಚ್ಛಿಕ ವಿಷಯಗಳು (Optional) ಮತ್ತು B.Ed ಪದವಿಯಲ್ಲಿನ Methods ಬಗ್ಗೆ ತಪ್ಪದೇ ತಿಳಿಸುವುದು.

** ಸೇವೆ ಸಲ್ಲಿಸಿದ ಅವಧಿಯನ್ನು ತಿಳಿಸುವಾಗ ಆಯಾಯ ಶೈಕ್ಷಣಿಕ ವರ್ಷದಲ್ಲಿ ಸದರಿ ವಸತಿ ಶಾಲೆಯಲ್ಲಿ ಹೊರಸಂಪನ್ಮೂಲ ಪ್ರಾಂಶುಪಾಲರು/ಶಿಕ್ಷಕರಾಗಿ ಕರ್ತವ್ಯಕ್ಕೆ ಹಾಜರಾದ ದಿನಾಂಕ, ತಿಂಗಳು, ವರ್ಷ ಮತ್ತು ಆಯಾಯ ಶೈಕ್ಷಣಿಕ ವರ್ಷಗಳಲ್ಲಿ ಕರ್ತವ್ಯದಿಂದ ಬಿಡುಗಡೆ ಹೊಂದಿದ ದಿನಾಂಕ, ತಿಂಗಳು, ವರ್ಷಗಳನ್ನು ತಪ್ಪದೇ ನಮೂದಿಸುವುದು.

ಈ ಮೇಲಿನ ಮಾಹಿತಿಯು ಸತ್ಯವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ.

ಪ್ರಾಂಶುಪಾಲರ ಹೆಸರು, ಮೊಹರು ಮತ್ತು ಸಹಿ/–

ಜಿಲ್ಲಾ ಮಟ್ಟದ ಅಧಿಕಾರಿಗಳ ಹೆಸರು, ಮೊಹರು ಮತ್ತು ಸಹಿ/–

ಅನುಸೂಚಿ

ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 01 ಆರ್‌ಟಿ(4)ಬಿ–1/2014 ದಿನಾಂಕ: 25–09–2014

ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕ: 25–10–2014(ಮಧ್ಯಾಹ್ನ 1:00 ಗಂಟೆಗೆ)

ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 25–10–2014(ಅಂಚೆ ಕಛೇರಿಯ ಕಾರ್ಯದ ವೇಳೆಯೊಳಗೆ)

ಗ್ರೂಪ್ –' ಎ' , 'ಬಿ' ಮತ್ತು 'ಸಿ' ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳು

ಹುದ್ದೆಗಳ ಅನುಕ್ರಮ ಸಂಖ್ಯೆ	ಹುದ್ದೆಯ ಸಂಕೇತ/ POST CODE	ಇಲಾಖೆಯ ಹೆಸರು ಹುದ್ದೆಯ ಪದನಾಮ ಮತ್ತು ಸಂಖ್ಯೆ	ವೇತನ ಶ್ರೇಣಿ	ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ	ವಯೋಮಿತಿ (ವಯಸ್ಸು ವರ್ಷಗಳಲ್ಲಿ)	ಹುದ್ದೆಗಳ ವರ್ಗೀಕರಣ
(1)	(2)	(3)	(4)	(5)	(6)	(7)
ಗ್ರೂಪ್– ' ಎ' ಹುದ್ದೆಗಳು						
01-03	**01**	ವಾರ್ತಾ ಇಲಾಖೆ ಯಲ್ಲಿ ಹಿರಿಯ ಸಹಾಯಕ ನಿರ್ದೇಶಕರು –03 ಹುದ್ದೆಗಳು **Senior Assistant Director in the Department of Information – 03 posts**	**₹.28,100 -50,100**	**1) Must be holder of degree in Journalism of a University established by Law in India or equivalent qualification.** **2) Must possess not less than 3 years experience as Sub-Editor or Reporter, Lay-out Artist or Copy Writer in News paper or journal with a circulation of not less than ten thousand or in News Agency of Advertisement or not less than three years experience as Class-II Officer in any of the Central or State Government or Semi Government publicity Organizations.** **3) Must have knowledge of the history, culture, and ecology of India with special reference to Karnataka.** **4) Must be well acquainted with English and Kannada, Preference being given to candidates possessing knowledge and experience in handling more than one media or communication.**	ಕನಿಷ್ಠ – 18 ಗರಿಷ್ಠ – 35 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 38 ಪ.ಜಾ, ಪ.ಪಂ, ಪ್ರ 1 } 40	see table below

ಮೀಸಲಾತಿ	ಇ	ಗ್ರಾ	ಒಟ್ಟು
ಪ್ರ.2ಎ	**01**	**–**	**01**
ಸಾ.ಅ	**01**	**01**	**02**
ಒಟ್ಟು	**02**	**01**	**03**

1	2	3	4	5	6	7
			ಗ್ರೂಪ್– 'ಬಿ' ಹುದ್ದೆಗಳು			
406 – 455	02	ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರು – 50 ಹುದ್ದೆಗಳು Principals in Morarji Desai Residential Schools in the Directorate of Minorities Welfare- 50 posts	₹.22,800 - 43200	(1) Must be holder of a Master's degree with B.Ed qualification and must have secured not less than fifty percent of the total marks, in case of Scheduled Castes, Scheduled Tribes and Category-I of other Backward Classes and sixty percent in respect of Others. (2) In respect of 5 posts along with above qualification must have studied Urdu as language at the degree level. (04 posts for State Cadre & 01 post for HK Region) Weightage:- Notwithstanding anything contained in the Karnataka Civil Services (Direct Recruitment by Competitive Examination and Selection) (General) Rules, 2006 While preparing the selection list, weightage of five marks shall be given for each completed year of service subject to a maximum of twenty five marks in respect of candidates appointed by the Karnataka Residential Education Institutions Society and who have worked as Principals in Morarji Desai Residential Schools on contract basis.	ಕನಿಷ್ಠ – 18 ಗರಿಷ್ಠ – 35 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 38 ಪ.ಜಾ, ಪ.ಪಂ, ಪ್ರ 1 } 40 Provided that in respect of candidates who have worked as Principals in Morarji Desai Residential Schools on contract basis, appointed by Karnataka Residential Education Institutions Society, the maximum age limit shall be relaxed by one year for each completed year of service subject to a maximum of five years.	(see below)

ರಾಜ್ಯ ವೃಂದಕ್ಕೆ ಸೇರಿದ ಹುದ್ದೆಗಳು

ಮೀಸಲಾತಿ	ಇ	ಮ	ಗ್ರಾ	ಮಾಸೈ	ಕಮಾಅ	ಅಂ.ವಿ	ಒಟ್ಟು
ಪ.ಜಾ	01	02	02	–	–	01*	06
ಪ.ಪ	01	01	–	–	–	–	02
ಪ್ರ.1	01	01	–	–	–	–	02
ಪ್ರ.2ಎ	01	02	02	–	–	01*	06
ಪ್ರ.2ಬಿ	01	01	–	–	–	–	02
ಪ್ರ.3ಎ	01	–	–	–	–	–	01
ಪ್ರ.3ಬಿ	01	–	–	–	–	–	01
ಸಾ.ಅ.	05	06	05	01	01	01*	19
ಒಟ್ಟು	12	13	09	01	01	03*	39

* ಅಂಗವಿಕಲ ಮೀಸಲಾತಿಯಡಿ ಕುಷ್ಠರೋಗ ವಿಮುಕ್ತ, ಶ್ರವಣದೋಷ, ಚಲನವಲನ ವೈಕಲ್ಯ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ಕಲ್ಪಿಸಿದೆ

ಹೈದ್ರಾಬಾದ್–ಕರ್ನಾಟಕ ಪ್ರದೇಶ ವ್ಯಾಪ್ತಿಯ ಅಭ್ಯರ್ಥಿಗಳಿಗೆ ಗುರುತಿಸಿರುವ ಹುದ್ದೆಗಳು

ಮೀಸಲಾತಿ	ಇ	ಮ	ಗ್ರಾ	ಅಂ.ವಿ	ಒಟ್ಟು
ಪ.ಜಾ	01	01	–	–	02
ಪ.ಪಂ.	01	–	–	–	01
ಪ್ರವರ್ಗ–1	01	–	–	–	01
ಪ್ರ.2ಎ	01	–	–	–	01
ಪ್ರ.2ಬಿ	01	–	–	–	01
ಸಾ.ಅ.	01	02	01	01*	05
ಒಟ್ಟು	06	03	01	01*	11

* ಅಂಗವಿಕಲ ಮೀಸಲಾತಿಯಡಿ ಕುಷ್ಠರೋಗ ವಿಮುಕ್ತ, ಶ್ರವಣದೋಷ, ಚಲನವಲನ ವೈಕಲ್ಯ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ಕಲ್ಪಿಸಿದೆ

(1)	(2)	(3)	(4)	(5)	(6)	(7)
456	03	ರೇಷ್ಮೆ ಇಲಾಖೆಯಲ್ಲಿ ಸಹಾಯಕ ಅಭಿಯಂತರರು (ಸಿವಿಲ್) –01 ಬ್ಯಾಕ್‌ಲಾಗ್ ಹುದ್ದೆ Assistant Engineer (Civil) in the Department of Sericulture- 01 (BL) post.	**₹.22,800 -43200**	Must possess a degree in Civil Engineering.	ಕನಿಷ್ಠ: 18 ಗರಿಷ್ಠ: 40	ಪರಿಶಿಷ್ಟ ಜಾತಿ(ಇತರೆ)–01 (ಬ್ಯಾ.ಲಾ) ಹುದ್ದೆ
457	04	ಔಷಧ ನಿಯಂತ್ರಣ ಇಲಾಖೆಯ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರು (ಫಾರ್ಮಾಕಾಗ್ನಸಿ) – 01 ಬ್ಯಾಕ್‌ಲಾಗ್ ಹುದ್ದೆ Lecturer in Pharmacognosy – 01 BL Post	**₹.15600 -39100 with grade pay**	Must possess Bachelor's Degree in Pharmacy and M.Pharm Degree in Pharmacognosy with First Class either at Bachelor's Degree in Pharmacy or M.Pharm Degree.	ಕನಿಷ್ಠ: 18 ಗರಿಷ್ಠ: 40	ಪರಿಶಿಷ್ಟ ಪಂಗಡ(ಇತರೆ)– 01 (ಬ್ಯಾ.ಲಾ) ಹುದ್ದೆ
458	05	ಔಷಧ ನಿಯಂತ್ರಣ ಇಲಾಖೆಯ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರು (ಫಾರ್ಮಾಸ್ಯುಟಿಕ್ಸ್) – 01 ಬ್ಯಾಕ್‌ಲಾಗ್ ಹುದ್ದೆ Lecturer in Pharmaceutics – 01 BL Post	**₹.15600 -39100 with grade pay**	Must possess Bachelor's Degree in Pharmacy and M.Pharm Degree in Pharmaceutics / Industrial Pharmacy with First Class either at Bachelor's Degree in Pharmacy or M.Pharm Degree.	ಕನಿಷ್ಠ: 18 ಗರಿಷ್ಠ: 40	ಪರಿಶಿಷ್ಟ ಪಂಗಡ(ಇತರೆ)– 01 (ಬ್ಯಾ.ಲಾ) ಹುದ್ದೆ

<table>
<tr><th>(1)</th><th>(2)</th><th>(3)</th><th>(4)</th><th>(5)</th><th>(6)</th><th>(7)</th></tr>
<tr><td colspan="7">ಗ್ರೂಪ್– ' ಸಿ' ಹುದ್ದೆಗಳು</td></tr>
<tr>
<td>04–13</td>
<td>06</td>
<td>ವಾರ್ತಾ ಇಲಾಖೆಯಲ್ಲಿ ವಾರ್ತಾ ಸಹಾಯಕರು
– 10 ಹುದ್ದೆಗಳು
Information Assistant in the Department of Information
- 10 Posts</td>
<td>₹.17,650-32,000</td>
